ಸಂಪುಟ : 8 ಸಂಚಿಕೆ : 169 ಪುಟ : 4 ಬೆಲೆ : 3.00 ಮಂಗಳವಾರ ಆಗಸ್ಟ್ 08, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 169 Pages : 4 Price : 3.00 Tuesday August 08, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಆಗಸ್ಟ್ 8ರ ಮಂಗಳವಾರ ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸ್ಥಳಗಳ ವಿವರ**

ವಾರ್ಡ್-ನಂ. 14ರ ವಕೀಲರ ಚಾಳ ಭಾಗ-1, 2 ಸ್ಟೇಷನ್ ರಸ್ತೆ, ಗೋಮ್ಸ್ ಬಿಲ್ಡಿಂಗ್, ಸ್ಟೇಡಿಯಂ, ಮುಲ್ಲಾ ಚಾಳ, ಕಾತರಕಿ ಚಾಳ, ಪಂಚಾಕ್ಷರಿನಗರ ಭಾಗ-1, ಭಾಗ-2, ಭಾಗ-3 ವಾರ್ಡ್-ನಂ. 26 ಕೃಷ್ಣಾ ಟಾಕೀಜ್, ಕಲಾಮಂದಿರ ರಸ್ತೆ, ಅಕ್ಕನಬಳಗ, ಜೆ.ಟಿ.ಮಠ ರಸ್ತೆ, ಅಂಗಡಿಯವರ ಲೈನ್, ಗೊಡಚಿಯವರ ಲೈನ್, ಗವಳಿಯವರ ಲೈನ್, ಜನತಾ ಕಿರಾಣಿ ಲೈನ್, ಸೋಡಾ ಅಂಗಡಿ ಲೈನ್, ಬಂಗಾರ ಶೆಟ್ಟರ ಲೈನ್, ಚಳ್ಳಮರದ ಅವರ ಲೈನ್, ಲಕ್ಷ್ಮೀ ಚಾಳ, ವಾರ್ಡ್-ನಂ 12, 28, ತೋಪಿಯವರ ಲೈನ್, ಮಾಸ್ತರ್ ಲೈನ್, ಉಪ್ಪಿನವರ ಲೈನ್, ಪಟ್ಟಣಶೆಟ್ಟಿ ಅವರ ಲೈನ್, ಗುಳಬಾಳ ಡಾ|| ಲೈನ್, ಶಿವನಗುತ್ತಿ ಲೈನ್, ವಾರ್ಡ್- ನಂ. 27ರ ಮೇರವಾಡೆ ಮಾಸ್ತರ್ ಲೈನ್, ಬುರಬುರೆ ಲೈನ್, ಉದ್ದಾರ ಮಾಸ್ತರ್ ಲೈನ್, ವಾರ್ಡ್- ನಂ.16ರಲ್ಲಿ ಡೋರಗಲ್ಲಿ, ಡಿ.ಸಿ.ಮಿಲ್ ರಸ್ತೆ, ಡೋರಗಲ್ಲಿ ಭಾಗ-1, ಭಾಗ-2, ವಾರ್ಡ್- ನಂ. 22 ದಖನಿ ಲೈನ್, ಈಶ್ವರ್ ಗುಡಿಲೈನ್, ಗಿರಣಿ ಲೈನ್, ಧಾರವಾಡದವರ ಲೈನ್, ವಾರ್ಡ್- ನಂ. 35ರಲಿ ಆದರ್ಶನಗರ ಜೋಶಿಯವರ ಲೈನ್, ದೊಡ್ಡ ಸರ್ ಮನೆಯವರ ಲೈನ್, 1ನೇ ಕ್ರಾಸ್, ವಾರ್ಡ್- ನಂ. 20 ಅಂಗನವಾಡಿ ಲೈನ, ಶೌಚಾಲಯ ಲೈನ್, ನಾಗಲಿಂಗ ನಗರ ಭಾಗ-1, ಭಾಗ-2 ಲ, ವಾರ್ಡ್- ನಂ.23 ಮಡಿವಾಳರ ಲೈನ್, ಲಕ್ಕುಂಡಿ ಅವರ ಲೈನ್, ಮಾನ್ವಿಯವರ ಲೈನ್, ಬಾಳಿಕಾಯಿ ಅವರ ಲೈನ್, ಗಣಪತಿ ಗುಡಿ ಲೈನ್, ಜಕ್ಕಲಿಯವರ ಲೈನ್,

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಪ್ರಕಟಣೆ ತಿಳಿಸಿದೆ.

### 9ನೇ ರಾಷ್ಟ್ರೀಯ ಕೈಮಗ್ಗ ದಿನಚರಣೆ ಕಾರ್ಯಕ್ರಮದಲ್ಲಿ ಸಚಿವ ಎಚ್ ಕೆ ಪಾಟೀಲ

# ಸಂದಿಗ್ಧದಲ್ಲೂ ವೃತ್ತಿ ನಿರತರಾದ ನೇಕಾರರಿಗೆ ಸಲಾಂ





■ವಿಜಯಸಾಕ್ಷಿ ಸುದ್ದಿ, ಗದಗ

ಕೈಮಗ್ಗದ ನೇಕಾರಿಕೆಯಲ್ಲಿ ಸಿಹಿ-ಕಹಿ ಅನುಭವ ಅನುಭವಿಸಿದ ನೇಕಾರರು ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಸಂಭ್ರಮ ಆಚರಿಸುವ ಸ್ಥಿತಿಯಲ್ಲಿಲ್ಲ. ಈ ಕುರಿತು ಆತ್ಮಾವಲೋಕನ ಮಾಡುವದು ಅಗತ್ಯವಾಗಿದೆ ಎಂದು ರಾಜ್ಯದ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಅಭಿಪ್ರಾಯಪಟ್ಟರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಸೋಮವಾರ ಜರುಗಿದ ಕೇಂದ್ರ ಸರ್ಕಾರದ ಜವಳಿ ಮಂತ್ರಾಲಯ ಅಭಿವೃದ್ಧಿ ಆಯುಕ್ತರವರ ಕಚೇರಿ(ಕೈಮಗ್ಗ), ನೇಕಾರರ ಸೇವಾ ಕೇಂದ್ರ ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಜರುಗಿದ '9ನೇ ಅಂತಾರಾಷ್ಟ್ರೀಯ ಕೈಮಗ್ಗ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಒಂದಾನೊಂದು ಕಾಲದಲ್ಲಿ ಕೈಮಗ್ಗ ನೇಕಾರಿಕೆ ಉತ್ತುಂಗದಲ್ಲಿದ್ದ ಸಂದರ್ಭದಲ್ಲಿ ನೇಕಾರಿಕೆ ವೃತ್ತಿ ಒಕ್ಕುಲುತನದ ನಂತರ ಹೆಚ್ಚಿನ ಉದ್ಯೋಗವಕಾಶ ▸▸3ನೇ ಪುಟಕ್ಕೆ

> ನೇಕಾರರ ಶ್ರೇಯೋಭಿವೃದ್ಧಿಗಾಗಿ ಜಾರಿಗೆ ತರಲಾದ ಅನೇಕ ಯೋಜನೆಗಳು ಯಶಸ್ವಿಯಾಗುತ್ತಿಲ್ಲ. ಕೈಮಗ್ಗ ನೇಕಾರರ ಧ್ವನಿಯಾಗಿ ಹೋರಾಟ ಮಾಡುವವರಿಗೆ ಧ್ವನಿ ಕೂಡುವುದಿಲ್ಲ. ಅವರ ಶ್ರೇಯೋಭಿವೃದ್ಧಿಗಾಗಿ ಏನೇ ಯೋಜನೆಗಳನ್ನು ಜಾರಿಗೆ ತಂದರೂ ಅವರ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೂ ನೇಕಾರಿಕೆ ಮುಂದುವರೆಸುತ್ತಿರುವದು ಸಂತಸದ ಸಂಗತಿಯಾಗಿದೆ. ರೈತರಿಗೆ ಯೋಗಿ, ತ್ಯಾಗಿ ಎನ್ನುತ್ತೇವೆ. ಅದೇ ರೀತಿ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಕೂಡ ನೇಕಾರಿಕೆ ವೃತ್ತಿಯನ್ನು ಮಾಡುತ್ತಿರುವ ನೇಕಾರರಿಗೆ ಸಲಾಂ.
>
> – ಎಚ್ ಕೆ ಪಾಟೀಲ.
> ಕಾನೂನು, ಪ್ರವಾಸೋದ್ಯಮ, ಜಿಲ್ಲಾ ಉಸ್ತುವಾರಿ ಸಚಿವರು.

### 'ಇಂದ್ರಧನುಷ್' ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ಸಚಿವ ಎಚ್ ಕೆ ಪಾಟೀಲ

# ಮಕ್ಕಳಿಗೆ ಸಂದರ್ಭಾನುಸಾರ ಲಸಿಕೆ ಕೊಡಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

0-5 ವಯೋಮಾನದ ಮಕ್ಕಳಿಗೆ ನಿಯಮಿತವಾಗಿ ನೀಡುವ ಲಸಿಕೆಗಳನ್ನು ತಪ್ಪದೇ ಹಾಕಿಸಬೇಕು. ಒಂದು ವೇಳೆ ಲಸಿಕೆ ಹಾಕಿಸದೇ ಇದ್ದಲ್ಲಿ ಇಂದ್ರಧನುಷ್ ಲಸಿಕಾ ಅಭಿಯಾನ ಜಿಲ್ಲೆಯಲ್ಲಿ ಆರಂಭವಾಗಿದ್ದು, ಮಕ್ಕಳಿಗೆ ಈ ಲಸಿಕೆಯನ್ನು ಕೊಡಿಸುವ ಮೂಲಕ ರೋಗಗಳಿಂದ ಮುಕ್ತರಾಗಿಸಬೇಕು ಎಂದು ರಾಜ್ಯದ ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಹೇಳಿದರು.



ನಗರದ ದುಂಡಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಏರ್ಪಡಿಸಲಾದ 'ಇಂದ್ರಧನುಷ್‌ಲಸಿಕಾ ಅಭಿಯಾನ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದ್ರಧನುಷ್ ಲಸಿಕಾ ಅಭಿಯಾನದಡಿ ಪೋಲಿಯೋ, ಡಿಫ್ತಿರಿಯಾ, ನಾಯಿಕೆಮ್ಮು, ಧನುರ್ವಾಯು, ಕ್ಷಯರೋಗ, ದಡಾರ, ಮೇನಿಂಜೈಟಿಸ್, ಹೆಪಾಟೈಟಿಸ್ ಬಿ, ರುಬೇಲಾ ಲಸಿಕೆಗಳನ್ನು ನೀಡಲಾಗುತ್ತಿದೆ. ತಪ್ಪದೇ 0-5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಕೊಡಿಸಬೇಕು. ಅನೇಕ ರೋಗಗಳಿಂದ ಈ ಲಸಿಕೆಗಳು ಮಕ್ಕಳನ್ನು ಆರೋಗ್ಯವಂತರಾಗಿಡಲು ಕಾರ್ಯನಿರ್ವಹಿಸುತ್ತವೆ. ಪೋಲಿಯೋದಂತಹ ಮಹಾಮಾರಿ ದೇಶದಲ್ಲಿ ಅನೇಕ ದುಷ್ಪರಿಣಾಮಗಳನ್ನು ಬೀರಿದ್ದು, ಅದಕ್ಕೆ ಲಸಿಕೆ ಕಂಡು ಹಿಡಿದು ನಿರಂತರವಾಗಿ ಲಸಿಕಾ ಅಭಿಯಾನ ನಡೆಸುವ ಮೂಲಕ ಇಂದು ದೇಶದಲ್ಲಿ ಪೋಲಿಯೋ ನಿರ್ನಾಮವಾಗಿದೆ. ನಾವೆಲ್ಲರೂ ಮಕ್ಕಳಿಗೆ ಸಂದರ್ಭಾನುಸಾರ ಲಸಿಕೆಗಳನ್ನು ಕೊಡಿಸುವದನ್ನು ಮರೆಯಬಾರದು ಎಂದರು. ಕಾರ್ಯಕ್ರಮದಲ್ಲಿ ಗದಗ ವೈದ್ಯಕೀಯ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಜಗದೀಶ ನುಚ್ಚಿನ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಬಿ ಸಿ ಕರಿಗೌಡರ, ಆರ್‌ಸಿಎಚ್ ಅಧಿಕಾರಿ ಡಾ. ರಾಜೇಶ ಗೊಜನೂರ, ಡಿಎಂಓ ಡಾ. ಎಸ್ ಎಸ್ ನೀಲಗುಂದ, ಡಾ. ಜಿ ಎಸ್ ಪಲ್ಲೇದ, ಡಾ. ಪ್ರೀತಮ್ ಖೋನಾ, ಡಾ. ಸೋಮಶೇಖರ ಬಿಜ್ಜಳ, ಡಾ. ವೆಂಕಟೇಶ ರಾಠೋಡ ಸೇರಿದಂತೆ ಗಣ್ಯರು, ಸಾರ್ವಜನಿಕರು ಹಾಜರಿದ್ದರು.

> ದೇಶದಲ್ಲಿ 2014ರಿಂದ ಮಿಷನ್ ಇಂದ್ರಧನುಷ್ ಕಾರ್ಯಕ್ರಮ ಆರಂಭವಾಗಿದೆ. ಲಸಿಕೆ ವಂಚಿತ 5 ವರ್ಷದೊಳಗಿನ ಎಲ್ಲ ಮಕ್ಕಳು ಹಾಗೂ ಗರ್ಭಿಣಿಯರಿಗೆ ಲಸಿಕೆಯನ್ನು ಆರೋಗ್ಯ ಸಿಬ್ಬಂದಿ, ವೈದ್ಯಾಧಿಕಾರಿಗಳು, ಖಾಸಗಿ ಆಸ್ಪತ್ರೆಗಳು, ಸಂಘ-ಸಂಸ್ಥೆಗಳು ಮತ್ತು ಆಶಾ ಕಾರ್ಯಕರ್ತೆಯರ ಸಹಯೋಗದೊಂದಿಗೆ ನಿಗದಿತ ಗುರಿ ತಲುಪಬೇಕಿದೆ. ಈ ಲಸಿಕೆ ಹಾಕಿಸುವದರಿಂದ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗುವ ಮೂಲಕ ಆರೋಗ್ಯಯುತ ಜೀವನ ನಡೆಸಲು ಸಾಧ್ಯವಾಗುತ್ತದೆ. ನಿಮ್ಮ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸಬೇಕು.
>
> – ವೈಶಾಲಿ ಎಂ ಎಲ್.
> ಗದಗ ಜಿಲ್ಲಾಧಿಕಾರಿಗಳು.

### ಇಂದ್ರಧನುಷ್ ಲಸಿಕಾ ಅಭಿಯಾನ ಕಾರ್ಯಕ್ರಮದಲ್ಲಿ ತಾ ಪಂ ಇಓ ಕೃಷ್ಣಪ್ಪ ಧರ್ಮರ ಕರೆ

# ಇಂದ್ರಧನುಷ್ 5.0 ಅಭಿಯಾನ ಯಶಸ್ವಿಗೊಳಿಸಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ


5 ವರ್ಷದೊಳಗಿನ ಲಸಿಕೆ ವಂಚಿತ ಮಕ್ಕಳು ಮತ್ತು ಗರ್ಭಿಣಿಯರ ಆರೋಗ್ಯ ರಕ್ಷಣೆಗಾಗಿ ವಿಶೇಷ ಇಂದ್ರಧನುಷ್ 5.0 ಲಸಿಕೆ ನೀಡುವ ಮಹತ್ವಾಕಾಂಕ್ಷಿ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಮಕ್ಕಳು, ಬಾಣಂತಿಯರು ಲಸಿಕೆ ಹಾಕಿಸಿಕೊಳ್ಳುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಾ ಪಂ ಇಓ ಕೃಷ್ಣಪ್ಪ ಧರ್ಮರ ಹೇಳಿದರು.



ಅವರು ಸೋಮವಾರ ಪಟ್ಟಣದ ಬನಶಂಕರಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಇಂದ್ರಧನುಷ್ ಲಸಿಕಾ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದ್ರಧನುಷ್ 5.0 ಲಸಿಕೆ ಅಭಿಯಾನದಡಿ ಐದು ವರ್ಷದೊಳಗಿನ ಮಕ್ಕಳು ಹಾಗೂ ಗರ್ಭಿಣಿಯರಿಗೆ ದಡಾರ, ರುಬೇಲಾ, ಪೋಲೀಯೋ, ಡಿಫ್ತಿರಿಯಾ, ನಾಯಿಕೆಮ್ಮು, ಧನುರ್ವಾಯು, ಕ್ಷಯರೋಗ, ಹೆಪಾಟೈಟಿಸ್ ಬಿ ನಿಯಂತ್ರಣದ ಪರಿಣಾಮಕಾರಿ ಲಸಿಕೆ ಇದಾಗಿದೆ. ಎಲ್ಲಾ ತಾಲೂಕಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉಪ ಕೇಂದ್ರಗಳು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಅಭಿಯಾನ ನಡೆಸಲಾಗುತ್ತಿದೆ. ಇಂದ್ರಧನುಷ್ 5.0 ಮೊದಲ ಹಂತವನ್ನು ಆಗಸ್ಟ್ 7ರಿಂದ 12ರವರೆಗೆ, ಎರಡನೇ ಹಂತವು ಸೆಪ್ಟೆಂಬರ್ 11ರಿಂದ 16ರವರೆಗೆ ಮತ್ತು ಮೂರನೇ ಮತ್ತು ಅಂತಿಮ ಹಂತ ಅಕ್ಟೋಬರ್ 9ರಿಂದ 14ರವರೆಗೆ ನಡೆಯಲಿದೆ ಎಂದು ಅವರು ಹೇಳಿದರು. ▸▸3ನೇ ಪುಟಕ್ಕೆ

## ಎಚ್ ಕೆ ಪಾಟೀಲರಿಂದ 'ಗೃಹ ಜ್ಯೋತಿ' ಯೋಜನೆಗೆ ಇಂದು ಚಾಲನೆ

■ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯ ಸರ್ಕಾರದ ಮಾಸಿಕ 200 ಯುನಿಟ್‌ಗಳವರೆಗೆ ಉಚಿತ ವಿದ್ಯುತ್ ಕಲ್ಪಿಸುವ 'ಗೃಹಜ್ಯೋತಿ' ಯೋಜನೆಯ ಗದಗ ಜಿಲ್ಲಾ ಮಟ್ಟದ ಉದ್ಘಾಟನಾ ಸಮಾರಂಭವವು ಆ.8ರಂದು ಬೆಳಿಗ್ಗೆ 11 ಗಂಟೆಗೆ ಗದುಗಿನ ಭಾರತರತ್ನ ಪಂ. ಭೀಮಸೇನ ಜೋಶಿ ರಂಗಮಂದಿರದಲ್ಲಿ ನಡೆಯಲಿದೆ.

ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್ ಕೆ ಪಾಟೀಲರು ಸಾಂಕೇತಿಕವಾಗಿ ಚಾಲನೆ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಪಕ್ಷದ ಮಾಜಿ ಹಾಗೂ ಹಾಲಿ ಶಾಸಕರು, ಪಕ್ಷದ ಜಿಲ್ಲಾ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು-ಪದಾಧಿಕಾರಿಗಳು, ಜಿಲ್ಲಾ ಪಂಚಾಯತ, ತಾಲೂಕು ಪಂಚಾಯತ, ಗ್ರಾಮ ಪಂಚಾಯತ, ಎಪಿಎಂಸಿ ಪಕ್ಷದ ಅಧ್ಯಕ್ಷರು-ಸದಸ್ಯರು, ನಗರಸಭೆ, ಪಟ್ಟಣ ಪಂಚಾಯತ, ಪುರಸಭೆ ಅಧ್ಯಕ್ಷರು-ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್ಸಿ-ಎಸ್ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವ್ ಗಾಂಧಿ ಪಂಚಾಯತ ಸಂಘಟನೆ, ಮಾಜಿ ಸೈನಿಕರ ವಿಭಾಗ, ಮೀನುಗಾರ ವಿಭಾಗ, ಕಾರ್ಮಿಕರ ವಿಭಾಗ, ಐಎನ್‌ಟಿಯುಸಿ, ಕಾನೂನು ಮತ್ತು ಮಾನವ ಹಕ್ಕು ವಿಭಾಗ, ಕಿಸಾನ್ ಮತ್ತು ಖೇತ್ ಮಜದೂರ ವಿಭಾಗ, ವೈದ್ಯರ ವಿಭಾಗ, ವೃತ್ತಿಪರರ ವಿಭಾಗ, ಪದವೀಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ ವಿಭಾಗ, ವಿಕಲಚೇತನರ ವಿಭಾಗ, ಐಟಿ ಮತ್ತು ಡಾಟಾ ವಿಭಾಗದ ಅಧ್ಯಕ್ಷರು-ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕು ಎಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ಅವರು ವಿನಂತಿಸಿದ್ದಾರೆ.

## ಉದ್ಯಾನವನದಲ್ಲಿ ಉದಯರಾಗ ಕಾರ್ಯಕ್ರಮ


■ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಕಾರ್ಯಕ್ರಮದಲ್ಲಿ ರವಿವಾರದಂದು ಬೆ.6.30 ರಿಂದ 7.30 ಗಂಟೆಯವರೆಗೆ ಗದಗನ ರಾಜೀವಗಾಂಧಿ ನಗರದ ಶಿವಶರಣ ಶ್ರೀ ಹರಳಯ್ಯ ಉದ್ಯಾನವನದಲ್ಲಿ ಶಾಮರಾವ್ ಪುಲಾರಿ ಅವರಿಂದ ಸುಗಮ ಸಂಗೀತ, ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಶರಣಯ್ಯ ಶಾಸ್ತ್ರಿಗಳು ಹಿರೇಮಠ ಇವರಿಂದ ಸುಗಮ ಸಂಗೀತ ಕಾರ್ಯಕ್ರಮಗಳು ಜರುಗಿತು.

# ಸಚಿವ ಎಚ್ ಕೆ ಪಾಟೀಲ ಅವರ ಇಂದಿನ ಪ್ರವಾಸ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಕೆ ಪಾಟೀಲ ಅವರ ಆಗಸ್ಟ್ 8ರ ಗದಗ ಜಿಲ್ಲಾ ಪ್ರವಾಸ ವಿವರ ಹೀಗಿದೆ.



ಬೆಳಿಗ್ಗೆ 11.30 ಗಂಟೆಗೆ ಗದಗ ನಗರದ ಹುಬ್ಬಳ್ಳಿ ರಸ್ತೆಯಲ್ಲಿನ ಪರಿಸರ ಲೇಔಟ್‌ನ ಭಾರತ ರತ್ನ ಪಂ. ಭೀಮಸೇನ ಜೋಶಿ ರಂಗಮಂದಿರದಲ್ಲಿ ಗೃಹಜ್ಯೋತಿ ಯೋಜನೆಗೆ ಚಾಲನೆ ನೀಡುವರು.

ಬೆಳಗ್ಗೆ 12.30 ಗಂಟೆಗೆ ಲಕ್ಕುಂಡಿಯಲ್ಲಿ ಗದಗ ಜಿಲ್ಲಾ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಸಮಿತಿ ವರದಿ ಸಲ್ಲಿಕೆ ಸಭೆಯಲ್ಲಿ ಪಾಲ್ಗೊಳ್ಳುವರು. ಸಾಯಂಕಾಲ 5 ಗಂಟೆಗೆ ಕೆ ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣ ಉಸ್ತುವಾರಿ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳುವರು.

ಸಾಯಂಕಾಲ 6.30 ಗಂಟೆಗೆ ಕೆ ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದ ಹತ್ತಿರದ ರೋಟರಿ ಕ್ಲಬ್‌ನಲ್ಲಿ ಜರುಗುವ ಶ್ರೀ ಸಿದ್ದರಾಮೇಶ್ವರ ಬಸಪ್ಪ ಬಾರಕೇರ ಇವರ ಸಾರ್ಥಕ ಸೇವಾ ನಿವೃತ್ತಿ ನಿಮಿತ್ತ ಅಭಿನಂದನಾ ಸಭೆಯಲ್ಲಿ ಭಾಗವಹಿಸಿ ಗದುಗಿನಲ್ಲಿ ವಾಸ್ತವ್ಯ ಮಾಡುವರು ಎಂದು ಸಚಿವರ ಕಾರ್ಯಾಲಯದ ಮೂಲಗಳು ತಿಳಿಸಿವೆ.

# ಶೈಕ್ಷಣಿಕ ವರ್ಷದ ಸಮಾರೋಪ ಸಮಾರಂಭ ಇಂದು

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಶ್ರೀ ಬೆನಕಪ್ಪ ಶಂಕ್ರಪ್ಪ ಸಿಂಹಾಸನದ ಸರ್ಕಾರಿ ಪ್ರಥಮದರ್ಜೆ ಮಹಾವಿದ್ಯಾಲಯದ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ, ಕ್ರೀಡಾ, ಯುವ ರೆಡ್ ಕ್ರಾಸ್, ಸ್ಕೌಟ್ ಮತ್ತು ಗೈಡ್ಸ್ ಹಾಗೂ ಎನ್‌ಎಸ್‌ಎಸ್ ಘಟಕಗಳ ವಾರ್ಷಿಕ ಸಮಾರೋಪ ಸಮಾರಂಭವನ್ನು ಕಾಲೇಜಿನ ಆವರಣದಲ್ಲಿ ಆಗಸ್ಟ್ 8ರ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ.



ರೋಣ ಮತಕ್ಷೇತ್ರದ ಶಾಸಕ, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಜಿ ಎಸ್ ಪಾಟೀಲ ಪಾಲ್ಗೊಳ್ಳಲಿದ್ದು, ವಿಶ್ವ ದಾಖಲೆಯ ಅಂಧ ಸ್ಕೇಟಿಂಗ್ ಕ್ರೀಡಾಪಟು, ಅಂತಾರಾಷ್ಟ್ರೀಯ ವೇದಿಕೆಗಳ ಭಾಷಣಕಾರ ಡಾ. ನಾನು ಪಾಟೀಲರು ಉಪನ್ಯಾಸ ನೀಡಲಿದ್ದಾರೆ. ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರು, ವಿವಿಧ ಘಟಕಗಳ ಮುಖ್ಯಸ್ಥರು ಪಾಲ್ಗೊಳ್ಳಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಮಹೇಂದ್ರ ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನ್ಯಾಯಾಂಗಕ್ಕೆ ಅನ್ಯಾಯವನ್ನು ತಡೆಯುವ ಶಕ್ತಿಯಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಸದಸ್ಯತ್ವ ಪುನಃ ಸ್ಥಾಪಿತವಾದಾಗ 24 ಗಂಟೆಯಲ್ಲಿ ಜಾರಿಯಾಗಬೇಕಿತ್ತು. ವಿಳಂಬ ಮಾಡಿದ ಪ್ರತೀ ನಿಮಿಷದ ಬಗ್ಗೆ ಸಚಿವಾಲಯ ಉತ್ತರಿಸಬೇಕು. ರಜೆಯಾಗಿದ್ದರೂ ಆದೇಶ ಮಾಡಲು ಬರುತ್ತಿರಲಿಲ್ಲವೇ? ಸುಪ್ರೀಂ ಕೋರ್ಟ್ ಮಂಗಳಾರತಿ ಮಾಡಿದ ನಂತರವಾದರೂ ಎಚ್ಚೆತ್ತುಕೊಳ್ಳಬಹುದಿತ್ತು. ಸುಪ್ರೀಂ ಕೋರ್ಟ್ ಕೊಟ್ಟ ತೀರ್ಪನ್ನು ತಕ್ಷಣವೇ ಜಾರಿ ಮಾಡಲು ಸಾಧ್ಯವಾಗಲಿಲ್ಲ ಇವರಿಗೆ. ಈ ತೀರ್ಪಿನ ಮೂಲಕ ನ್ಯಾಯಾಂಗಕ್ಕೆ ಅನ್ಯಾಯವನ್ನು ತಡೆಯುವ ಶಕ್ತಿಯಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದು ಸಚಿವ ಎಚ್ ಕೆ ಪಾಟೀಲ ನುಡಿದರು.



ರಾಹುಲ್ ಗಾಂಧಿಯವರ ಲೋಕಸಭಾ ಸದಸ್ಯತ್ವ ಅನರ್ಹತೆ ರದ್ದುಪಡಿಸಿದ ನ್ಯಾಯಾಲಯದ ತೀರ್ಪಿನ ಕುರಿತು ಮಾಧ್ಯಮದವರೊಂದಿಗೆ ಗದುಗಿನಲ್ಲಿ ಸಚಿವರು ಪ್ರತಿಕ್ರಿಯಿಸಿದರು.

ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರ ಸ್ವಾಮಿಯವರು, ಸರ್ಕಾರದ ಎಲ್ಲಾ ಭ್ರಷ್ಟಾಚಾರದ ದಾಖಲೆಗಳು ನನ್ನಲ್ಲಿವೆ, ಇವುಗಳೊಂದಿಗೆ ಪ್ರಧಾನಮಂತ್ರಿಗಳನ್ನು ಭೇಟಿಯಾಗುತ್ತೇನೆ ಎಂದು ಹೇಳಿಕೆ ನೀಡಿರುವದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಪ್ರಧಾನ ಮಂತ್ರಿಗಳು ಕುಮಾರಸ್ವಾಮಿಯವರಿಗೆ ಹತ್ತಿರವಿದ್ದಾರಾ? ಅವರ ಬಳಿ ಯಾಕೆ ವಿಷಯವನ್ನು ತೆಗೆದು-ಕೊಂಡು ಹೋಗ್ತೀರಿ? ಎಚ್‌ಡಿಕೆ ಏನು ಹೇಳಬೇಕೋ ಅದನ್ನು ಜನರಿಗೆ ನೇರವಾಗಿ ಹೇಳಬಹುದಿತ್ತು. ನಿಮ್ಮ ಕೈಯಲ್ಲೇ ವಿಧಾನಸಭೆಯಿತ್ತು. ಮತ್ತೇಕೆ ಪ್ರಧಾನಮಂತ್ರಿ ಮೋದಿಯವರವರೆಗೆ ಹೋಗ್ತೀರಿ, ಅಂತಿಮವಾಗಿ ನೀವು ಜನರ ಬಳಿಗೇ ಹೋಗಬೇಕು. ವಿಧಾನಸಭೆಯಲ್ಲಿ ಏನೂ ಹೇಳಲಿಲ್ಲ. ವಿಶೇಷ ನಿಯಮವಾಳಿಗಳ ಪ್ರಕಾರ ಮಾತನಾಡಬೇಕಿತ್ತು. ಬಜೆಟ್ ಮಂಡನೆಯ ನಂತರ ಮಾತನಾಡಬಹುದಿತ್ತು. ಇಷ್ಟರ ಮೇಲೆ ಹೋಗಬೇಕು ಅಂದುಕೊಂಡಿದ್ದಾರೆ. ವಿಷಯ ಅವರ ವಿವೇಚನೆಗೆ ಬಿಟ್ಟಿದ್ದು ಎಂದುತ್ತರಿಸಿದರು.

## ಬಸವೇಶ್ವರ ದೇವಾಲಯದಲ್ಲಿ ನಾಗರಹಾವು ಪ್ರತ್ಯಕ್ಷ; ಬೆಚ್ಚಿದ ಭಕ್ತರು

■ವಿಜಯಸಾಕ್ಷಿ ಸುದ್ದಿ, ಗದಗ

ಇವತ್ತು ಸೋಮವಾರ ಬಸವಣ್ಣನ ದರ್ಶನಕ್ಕೆ ಹೋಗಿದ್ದ ಭಕ್ತರಿಗೆ ನಾಗರಹಾವು ಕಂಡು ಕೆಲಕಾಲ ಗಾಬರಿಬಿದ್ದ ಘಟನೆ ನಡೆದಿದೆ.

ಗದಗ ತಾಲೂಕಿನ ಚಿಂಚಲಿ ಗ್ರಾಮದ ಗುಡ್ಡದಲ್ಲಿ ಇರುವ ಬಸವೇಶ್ವರ ದೇವಸ್ಥಾನಕ್ಕೆ ಹೋಗಿದ್ದ ಭಕ್ತರಿಗೆ ಬೃಹತ್ ಆಕಾರದ ನಾಗರಹಾವು ಕಂಡಿದೆ. ಇದರಿಂದಾಗಿ ಮಹಿಳೆಯರು ಹಾಗೂ ಮಕ್ಕಳು ಕೆಲಕಾಲ ತೀವ್ರ ಆತಂಕಗೊಂಡರು. ಗೋಡೆ ಏರಲು ನಾಗರಹಾವು ಪ್ರಯತ್ನ ಮಾಡುತ್ತಲೇ ಇದ್ದರೆ, ಕೆಲ ಯುವಕರು ಅದರ ವಿಡಿಯೋ ಮಾಡುತ್ತಿದ್ದರು. ಅದರಲ್ಲಿ ಒಬ್ಬರು ಪಕ್ಕದ ಕಳಸಾಪೂರ ತಾಂಡಾದ ಉರಗ ತಜ್ಞ ಸುರೇಶನಿಗೆ ಫೋನ್ ಮಾಡಿ ಸ್ಥಳಕ್ಕೆ ಕರೆಸಿದ್ದಾರೆ.



ಸುರೇಶ್ ಸ್ಥಳಕ್ಕೆ ಬಂದು ಬಸವಣ್ಣನ ಗರ್ಭಗುಡಿಯಲ್ಲಿ ಇದ್ದ ಬೃಹತ್ ನಾಗರಹಾವನ್ನು ರಕ್ಷಿಸಿ, ಸುರಕ್ಷಿತ ಸ್ಥಳಕ್ಕೆ ಬಿಟ್ಟು ಬಂದಿದ್ದಾರೆ.

## ಸಾಕ್ಷಿ ಸುಭಾಷಿತ

**ಅನುಭವ ಜೊತೆಗಿದ್ದರೆ ಮಾಹಿತಿ ಏನೇನೂ ಅಲ್ಲ**
**–ಅನಾಮಿಕ**

## ಸಂಪಾದಕೀಯ

# ಔರಾದ್ಕರ್ ವರದಿ ಜಾರಿ ಆಗಲಿ

ಕಾನೂನು ಸುವ್ಯವಸ್ಥೆ ಕಾಪಾಡುವ ಹೊಣೆಗಾರಿಕೆ ಹೊತ್ತ ಪೊಲೀಸರಿಗೆ ಸರಕಾರದಿಂದ ಈಗಲೂ ಹಲವಾರು ಸೌಲಭ್ಯಗಳು ಲಭ್ಯವಾಗಬೇಕಿದೆ. ಮುಖ್ಯವಾಗಿ ವೇತನ ಹೆಚ್ಚಳ ಸಹಿತ ಅನೇಕ ಪೊಲೀಸ್ ಕಲ್ಯಾಣ ಕಾರ್ಯಕ್ರಮಗಳು ಜಾರಿಯಾಗಬೇಕಿದೆ.

ಪೊಲೀಸರಲ್ಲಿನ ವೇತನ ತಾರತಮ್ಯ, ರಜೆ, ಬಡ್ತಿ ಸಹಿತ ಹಲವಾರು ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಎಡಿಜಿಪಿ ಔರಾದ್ಕರ್ ನೇತೃತ್ವದಲ್ಲಿ 2016ರಲ್ಲಿ ಕಾಂಗ್ರೆಸ್ ಸರಕಾರ ಸಮಿತಿ ರಚಿಸಿತು. ಕೇವಲ ಒಂದು ವರ್ಷದಲ್ಲಿ ಔರಾದ್ಕರ್ ಸಮಿತಿ ಅಂದಿನ ಕಾಂಗ್ರೆಸ್ ಸರಕಾರಕ್ಕೆ ವರದಿ ಸಲ್ಲಿಸಿತು. ಆದರೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಸರಕಾರ ಬದಲಾಯಿತು. ಆದರೆ ಔರಾದ್ಕರ್ ಸಮಿತಿ ವರದಿ ಯಥಾವತ್ತಾಗಿ ಜಾರಿಗೆ ಬರಲೇ ಇಲ್ಲ. ಈ ಹಿಂದಿನ ಬಿಜೆಪಿ ಸರಕಾರ ಔರಾದ್ಕರ್ ವರದಿ ಜಾರಿಗೊಳಿಸುವ ಭರವಸೆ ನೀಡಿತು. ಆದರೆ ಕೇವಲ ವೇತನ ಪರಿಷ್ಕರಣೆ ನಿರ್ಧಾರ ಪ್ರಕಟಿಸಿ ಔರಾದ್ಕರ್ ವರದಿ ಜಾರಿಗೊಳಿಸಿದ್ದೇವೆ ಎಂದು ಬೀಗಿತು. ಅಸಲಿಗೆ ಈವರೆಗೂ ಔರಾದ್ಕರ್ ವರದಿ ಜಾರಿ ಆಗಿಯೇ ಇಲ್ಲ. 2016 ರಲ್ಲಿ ಕೊಟ್ಟ ವರದಿ ಈಗ ಅಪ್ರಸ್ತುತ ಎನ್ನುವಂತಾಗಿದೆ. ಹೀಗಾಗಿ ಔರಾದ್ಕರ್ ವರದಿಗೆ ಪರಿಷ್ಕರಣೆ ಆಗಬೇಕು. ಮತ್ತು ಆ ವರದಿ ಯಥಾವತ್ತಾಗಿ ಜಾರಿಯಾಗಬೇಕು.

ಪೊಲೀಸರ ಬೀದಿಗಿಳಿದು ಹೋರಾಟ ಮಾಡಬಾರದು ಎನ್ನುವ ಕಾರಣಕ್ಕೆ ಅಂದಿನ ಕಾಂಗ್ರೆಸ್ ಸರಕಾರ ನೇಮಿಸಿದ್ದ ಔರಾದ್ಕರ್ ವರದಿಯನ್ನು ಕಾಂಗ್ರೆಸ್ ಯಥಾವತ್ತಾಗಿ ಜಾರಿಗೊಳಿಸಬೇಕು.

ಕಾಂಗ್ರೆಸ್ ಸರಕಾರ ಈ ಹಿಂದಿನ ಅನೇಕ ಕಾರ್ಯಕ್ರಮಗಳನ್ನು ಈ ಅವಧಿಯಲ್ಲಿ ಮತ್ತೆ ಮುಂದುವರಿಸುವ ನಿರ್ಧಾರ ಕೈಗೊಂಡಿದೆ. ಅದೇ ರೀತಿ ಈ ಹಿಂದಿನ ಅವಧಿಯಲ್ಲಿ ಔರಾದ್ಕರ್ ಸಮಿತಿ ನೀಡಿದ ವರದಿಯನ್ನು ಜಾರಿಗೊಳಿಸಿ, ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕಿದೆ. ಆದರೆ ಈಗಿನ ಗೃಹ ಸಚಿವ ಜಿ. ಪರಮೇಶ್ವರ ಅವರು, ಔರಾದ್ಕರ್ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಲು ಸಾಧ್ಯವಿಲ್ಲ ಎನ್ನುವ ಮಾತುಗಳನ್ನು ಆಡಿದ್ದಾರೆ. ಯಾವೆಲ್ಲಾ ಬೇಡಿಕೆ ಈಡೇರಿಸಲು ಸಾಧ್ಯವಿಲ್ಲ ಎನ್ನುವ ಬಗ್ಗೆ ಪೊಲೀಸ್ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ, ಪರ್ಯಾಯ ಮಾರ್ಗೋಪಾಯಗಳನ್ನು ಕಂಡುಕೊಂಡು ವರದಿ ಜಾರಿಗೆ ಮುಂದಾಗಬೇಕು.

ನುಡಿದಂತೆ ನಡೆದಿದ್ದೇವೆ ಎಂದು ಹೇಳಿಕೊಳ್ಳುವ ಸರಕಾರ, ಪೊಲೀಸರ ವಿಷಯದಲ್ಲಿ ಔರಾದ್ಕರ್ ಸಮಿತಿ ವರದಿ ಜಾರಿ ಮಾಡಿ ಮತ್ತೊಮ್ಮೆ ನುಡಿದಂತೆ ನಡೆದುಕೊಳ್ಳಲಿ.

## ಹಸಿದು ಬಂದವರಿಗೆ 1 ರೂಪಾಯಿಗೆ ಅನ್ನ ನೀಡುವ ಹುಬ್ಬಳ್ಳಿಯ ‘ರೋಟಿ ಘರ್’

# ಅನ್ನ ದೇವರ ಮುಂದೆ ಅನ್ಯ ದೇವರಿಲ್ಲ

ದಾನಗಳಲ್ಲಿ ಶ್ರೇಷ್ಠವಾದ ದಾನ ಅನ್ನದಾನ. ಹಸಿದು ಬಂದವರಿಗೆ ಒಂದು ಹೊತ್ತಿನ ಊಟ ಹಾಕಬೇಕು. ಪ್ರಪಂಚದಲ್ಲಿ ಕೆಟ್ಟ ಪರಿಸ್ಥಿತಿ ಎಂದರೆ ಹಸಿವು ನೀಗಿಸಿಕೊಳ್ಳುವುದು. ಹಸಿದಾಗ ಅನ್ನ, ಬಾಯಾರಿಕೆಯಾದಾಗ ನೀರು ಕೊಟ್ಟರೆ ಅಮೃತ ಸಮಾನವಾಗಿರುತ್ತದೆ. ಅಂದಹಾಗೆ, ಇಂದಿನ ದಿನಮಾನದಲ್ಲಿ 1 ರೂಪಾಯಿಗೆ ಏನು ಸಿಗುತ್ತದೆ ಹೇಳಿ?! ಆದರೆ, ಇಲ್ಲಿ, ಕೇವಲ 1 ರೂಪಾಯಿಗೆ ರೊಟ್ಟಿ ಸಿಗುತ್ತದೆ. ಈಗ ಹೇಳಹೊರಟಿರುವುದು, ಹುಬ್ಬಳ್ಳಿಯ ‘ರೋಟಿ ಘರ್’ ಬಗ್ಗೆ.

ಹುಬ್ಬಳ್ಳಿಯ ಕಂಚಗಾರ ಗಲ್ಲಿಯಲ್ಲಿರುವ ‘ರೋಟಿ ಘರ್’ ಹಸಿದು ಬಂದವರ ಹೊಟ್ಟೆ ತಂಪಾಗಿಸುತ್ತ, ಕೇವಲ 1 ರೂಪಾಯಿಗೆ ಮಧ್ಯಾಹ್ನದ ಊಟವನ್ನು ಜನರಿಗೆ ಉಣಬಡಿಸುತ್ತಿದೆ. ಕಡಿಮೆ ದುಡ್ಡಿನಲ್ಲಿ ಹೊಟ್ಟೆ ತುಂಬಿಸಿಕೊಳ್ಳುವ ದುಡಿವ ವರ್ಗದ ಜನರಿಗೆ ಇದು ಅನುಕೂಲಕರವಾಗಿದೆ. ಬೇರೆ ಹೋಟೇಲ್‌ಗಳಿಗೆ ಹೋದರೆ 100–120 ರೂ ಕೊಟ್ಟು ಊಟ ಮಾಡಬೇಕು. ಆದರಿಲ್ಲಿ, ಸಾತ್ವಿಕ, ರುಚಿ ಹಾಗೂ ಶುಚಿಯಾದ ಆಹಾರವನ್ನು ವಾರದ ಆರು ದಿನಗಳ ಕಾಲ ಜನರಿಗೆ ಬಡಿಸಲಾಗುತ್ತದೆ.



ಬಸವರಾಜ ಮೆಣಸಿನಕಾಯಿ, ಬೌರಮ್ಮ ತೋಟಗೇರ ಮತ್ತು ರುಕ್ಮಿಣಿ ತಳಕೇರಿ ಎಂಬ ಮೂವರು ಸಿಬ್ಬಂದಿಗಳು ಕಳೆದ 14 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಮಾರುಕಟ್ಟೆಗೆ ತೆರಳಿ ಉತ್ತಮ ಗುಣಮಟ್ಟದ ಆಹಾರ–ಪದಾರ್ಥಗಳನ್ನು ತಂದು ಅಡುಗೆ ಸಿದ್ಧಪಡಿಸುತ್ತಾರೆ. ರುಚಿಯಾದ ಅಡುಗೆ ಮಾಡುವುದು, ಬಡಿಸುವುದು ಸೇರಿದಂತೆ ಇತರೆ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಜನ ಸೇವೆಯೇ ಜನಾರ್ದನ ಸೇವೆ ಎಂದು ತಿಳಿದು ಸಿಬ್ಬಂದಿಗಳು ಸೇವೆಗೈಯುತ್ತಿದ್ದಾರೆ.

ಜೈನ್ ಮುಖಂಡರೊಬ್ಬರು ಸಮಾಜಮುಖಿ ಕಾರ್ಯಗಳನ್ನು ಮಾಡುವ ಹಂಬಲದಲ್ಲಿದ್ದಾಗ, ಜನರಿಗೆ ಉಚಿತವಾಗಿ ಊಟ ನೀಡುವ ಆಲೋಚನೆ ಬರುತ್ತದೆ. ನಂತರ ‘ರೋಟಿ ಘರ್’ ಹೆಸರಿನಲ್ಲಿ ಊಟವನ್ನು ಆರಂಭಿಸಲಾಯಿತು. ಹುಬ್ಬಳ್ಳಿಯ ಮಹಾವೀರ ಯೂಥ್ ಫೆಡರೇಶನ್ ಅಡಿಯಲ್ಲಿ ಕಳೆದ 14 ವರ್ಷದಿಂದ ಇಲ್ಲಿಯವರೆಗೆ ರೋಟಿ ಘರ್ ಕಾರ್ಯನಿರ್ವಹಿಸುತ್ತಿದೆ. ಇದರಲ್ಲಿ 29 ಮಂದಿ ಸದಸ್ಯರಿದ್ದು, ಜೈನ್ ಸಮುದಾಯದ ಹಿರಿಯ ಮುಖಂಡರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ಮೊದಲು ಉಚಿತವಾಗಿ ಊಟವನ್ನು ನೀಡಲಾಗುತ್ತಿತ್ತು. ನಂತರ 1 ರೂಪಾಯಿಗೆ ಊಟ ನೀಡಲು ಆರಂಭಿಸಲಾಯಿತು. ಸಮಿತಿಯ ಅಧ್ಯಕ್ಷರಾದ ಆನಂದಕುಮಾರ ಪಟ್ವಾ, ಸುರೇಶ ಜೈನ್, ವಿಕ್ರಮ ಜೈನ್ ಸೇರಿದಂತೆ 29 ಜನ ಸದಸ್ಯರು ರೋಟಿ ಘರ್‌ಗೆ ಯಾವುದೇ ಕೊರತೆ ಆಗದಂತೆ ನೋಡಿಕೊಳ್ಳುತ್ತಿದ್ದಾರೆ. ಒಂದು ತಿಂಗಳಿಗೆ ಸುಮಾರು 50 ಸಾವಿರ ರೂ. ಖರ್ಚು ಬರುತ್ತದೆ. ಇದರ ಖರ್ಚು–ವೆಚ್ಚಗಳನ್ನು ಸದಸ್ಯರು ಹಾಗೂ ದಾನಿಗಳ ನೆರವಿನಿಂದ ನಿರ್ವಹಿಸಲಾಗುತ್ತಿದೆ.

ಬುಧವಾರ ಹೊರತುಪಡಿಸಿ ಉಳಿದ ದಿನಗಳಂದು ಮಧ್ಯಾಹ್ನ 12.30ರಿಂದ 2.30ರವರೆಗೆ ಊಟವನ್ನು ಒದಗಿಸಲಾಗುತ್ತದೆ. ಮಂಗಳವಾರ, ಶನಿವಾರ ಎರಡು ದಿನ ಚಪಾತಿ, ಅನ್ನ ಸಾರು, ಅನ್ನ ಮಜ್ಜಿಗೆ ಸಾರು, ಪಲಾವ್, ಚಿತ್ರಾನ್ನ, ರವಿವಾರ ಊಟದೊಂದಿಗೆ ಸಿಹಿ ನೀಡಲಾಗುತ್ತದೆ. ಮಾರುಕಟ್ಟೆ ಬುಧವಾರ ಬಂದ್ ಇರುವುದರಿಂದ ಬುಧವಾರದಂದು ರೋಟಿ ಘರ್‌ಗೂ ರಜೆ. ಯಾವುದೇ ಜಾತಿ, ಧರ್ಮ, ಲಿಂಗ ಭೇದವಿಲ್ಲದೇ ಎಲ್ಲರಿಗೂ ಊಟ ನೀಡಲಾಗುತ್ತದೆ. ಕೆಲವು ಸಾರಿ ಒಂದು ರೂಪಾಯಿ ಕೊಡದಿದ್ದರೂ ಸಹ ಊಟ ಮಾಡಬಹುದು.



ಒಂದು ದಿನ, ವಾರ, ತಿಂಗಳುಗಳವರೆಗೆ ರೋಟಿ ಘರ್ ಖರ್ಚನ್ನು ನೋಡಿಕೊಳ್ಳುವ ದಾನಿಗಳಿದ್ದಾರೆ. ಜನ್ಮದಿನ, ಮದುವೆ ವಾರ್ಷಿಕೋತ್ಸವ ಹಾಗೂ ಶುಭ ಸಂದರ್ಭಗಳಂದು ಕೆಲವರು ದೇಣಿಗೆ ನೀಡುತ್ತಾರೆ. ಅಂದು ಊಟಕ್ಕೆ ಬಂದವರಿಗೆ ಸಿಹಿ ವಿತರಿಸಲಾಗುತ್ತದೆ. ಕರೋನಾ ವ್ಂ ಹಾ ವ್ಂಾ ರಿ ವ್ಯಾಪಕವಾಗಿ ಹರಡಿದ ಸಂದರ್ಭದಲ್ಲಿಯೂ ರೋಟಿ ಘರ್ ತನ್ನ ಕಾರ್ಯ ಮುಂದುವರೆಸಿಕೊಂಡು ಬಂದಿತ್ತು ಎಂಬುದು ವಿಶೇಷ.



**– ನಾಗಪ್ಪ ಕೆ ಎಮ್.**
ರಾಜ್ಯ ಸಮಾಚಾರ ಕೇಂದ್ರ, ಹುಬ್ಬಳ್ಳಿ.

# ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ

**■ ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಸಮಾಜದಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸುವ ಅಗತ್ಯವಿದೆ. ವಚನ ಪಿತಾಮಹ ಫ ಗು ಹಳಕಟ್ಟಿ ಅವರು ವಚನಗಳಿಗಾಗಿ ಜೀವನವನ್ನೇ ಮುಡುಪಾಗಿಟ್ಟವರು. ಅವರ ಸಂಗ್ರಹಿಸಿದ ವಚನಗಳು ನಮ್ಮ ನಿತ್ಯ ಜೀವನಕ್ಕೆ ತುಂಬಾ ಸಹಕಾರಿಯಾಗಿದ್ದು, ಅವಗಳನ್ನು ನಾವು ಎಲ್ಲರೂ ಓದುವ ಮೂಲಕ ನಮ್ಮ ಜೀವನದಲ್ಲಿ ಅಳವಡಿಸಿಕೋಳ್ಳೊಣ ಎಂದು ಸರಕಾರಿ ಹಿರಿಯ ಹೆಣ್ಣು ಮಕ್ಕಳ ಶಾಲೆಯ ಶಿಕ್ಷಕ ಪಿ ಎಸ್ ಮರಿದೇವರಮಠ ಹೇಳಿದರು.



ಅವರು ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿ ಗವಿಮಠದ ಸಭಾಭವನದಲ್ಲಿ ಜರುಗಿದ ಮುಳಗುಂದ ಹೋಬಳಿ ಕಸಾಪ ವತಿಯಿಂದ ಹಮ್ಮಿಕೊಂಡಿದ್ದ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.

ಮುಳಗುಂದ ಕಸಾಪ ಘಟಕದ ಅಧ್ಯಕ್ಷ ಡಾ. ಎಸ್ ಸಿ ಚವಡಿ, ಮಾಹಾಂತೇಶ ನಪೂರಿಮಠ, ಕೆ ಎಂ ಹೆರಕಲ್ಲ, ಶೋಭಾ ಪಾಟೀಲ್, ಶಿವಾನಂದ ಅಪ್ತಗೇರಿ, ರಾಜೇಶ್ವರಿ ಬಡ್ನಿ, ನಂದಾ ಮಟ್ಟಿ, ಪವಿತ್ರಾ ಮಟ್ಟಿ ಸೇರಿದಂತೆ ಸಾಹಿತ್ಯಾಸಕ್ತರು ಇದ್ದರು.

# ತಂದೆ–ತಾಯಿಗಳೇ ಮಕ್ಕಳ ಪ್ರತಿಭೆ ಗುರುತಿಸಬೇಕು

**■ ವಿಜಯಸಾಕ್ಷಿ ಸುದ್ದಿ, ಗದಗ**

ಬಾಲಕ, ಪಾಲಕ ಮತ್ತು ಶಿಕ್ಷಕ ಈ ಮೂವರು ಮಗುವಿನ ಪ್ರತಿಭೆಯ ಅನಾವರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅದರಲ್ಲೂ ತಂದೆ–ತಾಯಿಗಳು ಮೊದಲು ತಮ್ಮ ಮಕ್ಕಳ ಇಚ್ಛೆ, ಅಭಿರುಚಿ, ವಿಷಯಾಸಕ್ತಿ ಅರಿತು ಪ್ರೊತ್ಸಾಹಿಸಿದಲ್ಲಿ, ಅಂಥಹ ಮಗುವನ್ನು ಈ ಜಗತ್ತು ಗುರುತಿಸಬಲ್ಲದು ಎಂದು ಸ್ಟೂಡೆಂಟ್ ಎಜ್ಯುಕೇಶನ್ ಸೊಸೈಟಿಯ ನಿರ್ದೇಶಕ ಪ್ರೊ. ರೋಹಿತ ಒಡೆಯರ್ ಅಭಿಪ್ರಾಯಪಟ್ಟರು.

ಅವರು ಸನ್ಮಾರ್ಗ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಜರುಗಿದ ಪಾಲಕರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.




ಸ್ಟೂಡೆಂಟ್ ಎಜ್ಯುಕೇಶನ್ ಸೊಸೈಟಿಯ ನಿರ್ದೇಶಕ ಪ್ರೊ. ಉಡುಪಿ ದೇಶಪಾಂಡೆ ಮಾತನಾಡಿ, ಮೊಬೈಲ್, ಟಿವಿಯಿಂದ ನಿಮ್ಮ ಮಕ್ಕಳನ್ನು ದೂರವಿಡಿ. ಅಭ್ಯಾಸಕ್ಕೆ ಮೊಬೈಲ್ ಅನಿವಾರ್ಯ ಎಂದು ನಿಮ್ಮ ಮಕ್ಕಳು ನಿಮ್ಮನ್ನು ಮನಗಾಣಿಸಿದಾಗ, ನೀವೂ ಅವರೆಡೆ ಗಮನ ಕೊಡಿ. ಮೊಬೈಲ್‌ನಲ್ಲಿ ಏನು ನೋಡುತ್ತಾನೆ, ಏನಿಲ್ಲ ಎಂಬುದನ್ನು ಕೂಲಂಕುಶವಾಗಿ ನಿಗಾವಹಿಸಿ ಎಂದು ಪಾಲಕರಿಗೆ ಕರೆನೀಡಿದರು.

ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ ಮಾತನಾಡಿ, ನಿಮ್ಮ ಮಗು ವಿನಯವಂತನಾದರೆ ಮಾತ್ರ ಈ ಜಗತ್ತಿನಲ್ಲಿ ಜೀವನ ಸಾಗಿಸುತ್ತಾನೆ. ಇಂದು ಎಷ್ಟೋ ಕಂಪನಿಗಳು ವಿನಯ–ವಿಧೇಯತೆ ಇಲ್ಲದ ತಮ್ಮ ನೌಕರರನ್ನು ತೆಗೆದು ಹಾಕಿದ್ದ ಸಂದರ್ಭವನ್ನು ಸಭೆಗೆ ವಿವರಿಸಿದರು.

ವೇದಿಕೆಯ ಮೇಲೆ ಸಂಸ್ಥೆಯ ಚೇರಮನ್ ಪ್ರೊ. ರಾಜೇಶ ಕುಲಕರ್ಣಿ, ಸದಸ್ಯರಾದ ಪ್ರೊ. ರಾಹುಲ್ ಒಡೆಯರ್, ಪ್ರೊ. ಸಯ್ಯದ್ ಮತೀನ್ ಮುಲ್ಲಾ, ಆಡಳಿತಾಧಿಕಾರಿ ಎಮ್ ಸಿ ಹಿರೇಮಠ ಉಪಸ್ಥಿತರಿದ್ದರು. ಪ್ರೊ. ಶುಭಶ್ರೀ ಶಿರಹಟ್ಟಿ ಸ್ವಾಗತಿಸಿದರೆ, ಪ್ರೊ. ವಿಜಯಲಕ್ಷ್ಮೀ ಲಕ್ಷ್ಮೇಶ್ವರ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ವಿಜಯ ಡಿ ಹೆಬಸೂರ ವಂದಿಸಿದರು.

# ಜೇಡರ ದಾಸಿಮಯ್ಯ ಜಯಂತಿ ಆಚರಣೆ



**■ ವಿಜಯಸಾಕ್ಷಿ ಸುದ್ದಿ, ನರಗುಂದ**

ತಾಲೂಕಿನ ಶಿರೋಳ ಗ್ರಾಮದಲ್ಲಿ ಜೇಡರ ದಾಸಿಮಯ್ಯ ಜಯಂತಿ ಅಂಗವಾಗಿ ಕರುಹಿನಶೆಟ್ಟಿ ಸಮಾಜದ ಗುರು ಹಿರಿಯರು ಹಾಗೂ ಸಮಾಜದ ಯುವಕರು ಶ್ರೀ ನೀಲಕಂಠೇಶ್ವರ ವೃತ್ತದಲ್ಲಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಹಾಮಂಡಳದ ಮಾಜಿ ಅಧ್ಯಕ್ಷ ದ್ಯಾಮಣ್ಣ ಕಾಡಪ್ಪನವರ, ಪ್ರಕಾಶ ಸೊಬರದ, ಶೇಖರಪ್ಪ ಕಟಗೇರಿ, ವೀರಪ್ಪ ಮುಳ್ಳೂರ, ಶಿವಾನಂದ ಬೆಟಗೇರಿ, ಡಾ. ವ್ಹಿ. ಎಸ್. ಚವಡಿ, ಕರಬಸು ರಾಮಾಪುರ, ಬಸವರಾಜ ಅಬ್ಬಿಗೇರಿ, ಜಂಬಣ್ಣ ದಿಂಡಿ, ನಾಗಪ್ಪ ಕಲಾದಗಿ, ರವಿ ದಿಂಡಿ, ವೀರೇಶ್ ಮುದೇನಗುಡಿ ಮತ್ತು ಶರಣಪ್ಪ ಕಾಡಪ್ಪನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಗರದ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸಾಂಪ್ರದಾಯಕ ಉಡುಗೆಯ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿನಿಯರು ಲಂಗ ದಾವಣಿಯಲ್ಲಿ, ವಿದ್ಯಾರ್ಥಿಗಳು ಬಿಳಿ ಲುಂಗಿ, ಬಿಳಿ ಅಂಗಿ ಹೆಗಲ ಮೇಲೆ ವಸ್ತ್ರದಲ್ಲಿ ಉಪನ್ಯಾಸಕರೂ ಸಹ ಉತ್ಸಾಹದಿಂದ ಭಾಗವಹಿಸಿದ್ದರು.



# ರಾಹುಲ್ ಗಾಂಧಿ ಅವರ ಧ್ವನಿ ಹತ್ತಿಕ್ಕಲು ಸಾಧ್ಯವಿಲ್ಲ



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ ವಿರುದ್ಧ ವಿಧಿಸಿದ್ದ ಮಾನನಷ್ಟ ಮೊಕದ್ದಮೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವದು ಸತ್ಯಕ್ಕೆ ಸಂದ ಜಯವಾಗಿದೆ ಎಂದು ಕಾಂಗ್ರೆಸ್ ಪಕ್ಷದ ನಗರ ಘಟಕದ ಅಧ್ಯಕ್ಷ ಅಂಬರೀಶ ತೆಂಬದಮನಿ ಹೇಳಿದರು.

ಅವರು ಪಟ್ಟಣದ ಶಿಗ್ಲಿ ಕ್ರಾಸ್‌ನಲ್ಲಿ ಶನಿವಾರ ಸಂಜೆ ರಾಹುಲ್ ಗಾಂಧಿ ಪ್ರಕರಣಕ್ಕೆ ಸುಪ್ರೀಂಕೋರ್ಟ ತಡೆಯಾಜ್ಞೆ ನೀಡಿದ ಹಿನ್ನಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದ ಸಂದರ್ಭದಲ್ಲಿ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ವ್ಯಕ್ತಿಗೆ ಅನ್ಯಾಯವಾಗದಂತೆ ನ್ಯಾಯಾಂಗದ ಶಕ್ತಿ ಪೀಠ ಇದೆ ಎಂಬುದಕ್ಕೆ ಸುಪ್ರೀಂ ಕೋರ್ಟಿನ ರಾಹುಲ್ ಗಾಂಧಿ ಪರ ತೀರ್ಪು ಸಾಕ್ಷಿಯಾಗಿದೆ. ಯಾವುದೇ ಕಾರಣಕ್ಕೂ ರಾಹುಲ್ ಗಾಂಧಿ ಅವರ ಧ್ವನಿ ಹತ್ತಿಕ್ಕಲು ಸಾಧ್ಯವಿಲ್ಲ. ದೇಶ ಹಾಗೂ ಜನರ ಹಿತಕ್ಕಾಗಿ ರಾಹುಲ್ ಗಾಂಧಿ ಅವರು ಎತ್ತುತ್ತಿರುವ ಧ್ವನಿಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಈ ತೀರ್ಪು ಮಹತ್ವದ್ದಾಗಿದೆ ಎಂದು ಹೇಳಿದರು

ಪುರಸಭೆ ಸದಸ್ಯ ಮಹಾದೇವಪ್ಪ ಅಣ್ಣಿಗೇರಿ, ಸಾಹೇಬಜಾನ್ ಹವಾಲ್ದಾರ, ಮಂಜುನಾಥ ಶೇರಸೂರಿ, ಕಿರಣ ನವಲೆ, ನಜೀರಅಹ್ಮದ ಗದಗ, ನೀಲಪ್ಪ ಪೂಜಾರ, ಆಪ್ಜಲ ರಿತ್ತಿ, ವೀರೇಂದ್ರ ಭಜಂತ್ರಿ, ಶಿವಾನಂದ ಲಿಂಗಶೆಟ್ಟಿ, ಯಲ್ಲಪ್ಪ ಹಂಜಗಿ ಸೇರಿದಂತೆ ಕಾಂಗ್ರೆಸ್ ಪಕ್ಷದ ನೂರಾರು ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡರು.

# ಶೌರ್ಯ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**■ ವಿಜಯಸಾಕ್ಷಿ ಸುದ್ದಿ, ಗದಗ**

6 ರಿಂದ 18 ವರ್ಷದೊಳಗಿನ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣ ರಕ್ಷಣೆಗಾಗಿ ಧೈರ್ಯ, ಸಾಹಸ ಪ್ರದರ್ಶಿಸಿದ ಇಬ್ಬರೂ ಮಕ್ಕಳಿಗೆ (ಒಬ್ಬ ಬಾಲಕ ಮತ್ತು ಒಬ್ಬ ಬಾಲಕಿಯರಿಗೆ) ಶೌರ್ಯ ಪ್ರಶಸ್ತಿಯನ್ನು ಕೇಂದ್ರ ಸರಕಾರದ ರಾಷ್ಟ್ರೀಯ ಮಕ್ಕಳ ಕಲ್ಯಾಣ ಸಮಿತಿಯು ನೀಡಿ ಗೌರವಿಸುತ್ತದೆ. ಶೌರ್ಯ ಪ್ರಕರಣವು ಜುಲೈ–1–2022 ರಿಂದ ಸೆಪ್ಟೆಂಬರ್ 30–2023ರೊಳಗೆ ನಡೆದಿರಬೇಕು, ನಡೆದ ಪ್ರಕರಣವು ದಿನ ಪತ್ರಿಕೆಯಲ್ಲಿ ಪ್ರಕಟವಾಗಿರಬೇಕು ಅಥವಾ ಈಖಖ ಆಗಿರಬೇಕು ಅಥವಾ ಪೊಲೀಸ್ ಡೈರಿಯಲ್ಲಿ ದಾಖಲಾಗಿರಬೇಕು.

ಆಯ್ಕೆಯಾದ ಮಕ್ಕಳಿಗೆ ನೀಡಲ್ಪಡುವ ಪ್ರಶಸ್ತಿಯು ಮೆಡಲ್ (ಗೋಲ್ಡ್, ಸಿಲ್ವರ್), ಪ್ರಮಾಣ ಪತ್ರ ಮತ್ತು ನಗದು ಬಹುಮಾನ ಒಳಗೊಂಡಿರುತ್ತದೆ.

ಅರ್ಹ ಪ್ರಶಸ್ತಿ ಪುರಸ್ಕೃತರು ತಮ್ಮ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಆರ್ಥಿಕ ಸಹಾಯವನ್ನು ನೀಡಲಾಗುತ್ತದೆ. ಪದವಿ/ಸ್ನಾತಕೋತ್ತರ/ವೃತ್ತಿಪರ ಕೋರ್ಸಗಳಿಗೆ ವಿದ್ಯಾರ್ಥಿವೇತನ ಯೋಜನೆಯಡಿ ಆರ್ಥಿಕ ನೆರವು ನೀಡಲಾಗುತ್ತದೆ.

ಅರ್ಜಿಯನ್ನು ಈ ಕೆಳಗಿನ ಯಾವುದಾದರೂ ಇಬ್ಬರೂ ವ್ಯಕ್ತಿಗಳು ಶಿಫಾರಸ್ಸು ಮಾಡಬೇಕು. ಅರ್ಜಿದಾರರು ವ್ಯಾಸಂಗ ಮಾಡುತ್ತಿರುವ ಪ್ರಾಂಶುಪಾಲರು, ಶಾಲಾ ಮುಖ್ಯೋಪಾಧ್ಯಾಯರು ಅಥವಾ ಪಂಚಾಯತ/ ಜಿಲ್ಲಾ ಪರಿಷತ್ ಮುಖ್ಯಸ್ಥರು. ಮಕ್ಕಳ ಕಲ್ಯಾಣಕ್ಕಾಗಿ ರಾಜ್ಯ ಮಂಡಳಿಯ ಅಧ್ಯಕ್ಷ ಅಥವಾ ಪ್ರಧಾನ ಕಾರ್ಯದರ್ಶಿ, ಜಿಲ್ಲಾಧಿಕಾರಿಗಳು/ಜಿಲ್ಲಾ ನ್ಯಾಯಾಧೀಶರು/ಸರ್ಕಾರ ಸಮಾನ ಶ್ರೇಣಿಯ ಅಧಿಕಾರಿ,

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಅಥವಾ ಉನ್ನತ ಶ್ರೇಣಿಯ ಪೊಲೀಸ್ ಅಧಿಕಾರಿ. ಅರ್ಜಿಯನ್ನು Website: WWW. iccw.co.in .ನಲ್ಲಿ ಅಕ್ಟೋಬರ್ 15–2023ರೊಳಗೆ ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ ಕೊಠಡಿ ಸಂ:06 ಜಿಲ್ಲಾ ಆಡಳಿತ ಭವನ ಗದಗ ದೂರವಾಣಿ ಸಂ:08372–220711 ಇಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

## 16ನೇ ಬಾರಿಗೆ ನಡೆಯುವ ಕೊಪ್ಪಳ ಜಿಲ್ಲಾ ಉತ್ಸವದ ಪೂರ್ವಭಾವಿ ಸಭೆ

# ಡಾ.ಸಿದ್ಧಯ್ಯ ಪುರಾಣಿಕರ ವಚನ ಸಾಹಿತ್ಯದ ಸ್ಮರಣೆ ಶ್ಲಾಘನೀಯ

**■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಕೊಪ್ಪಳ ಜಿಲ್ಲೆಯ ಹೆಮ್ಮೆಯ ಕವಿಗಳಾದ ಡಾ.ಸಿದ್ಧಯ್ಯ ಪುರಾಣಿಕರ ಟ್ರಸ್ಟ್ ಮಾಡಿರುವುದು ಸಂತಸದ ಸಂಗತಿ. ಆಗಸ್ಟ್ 24 ರಿಂದ 28 ರವರೆಗೆ ನಡೆಯುವ ಕೊಪ್ಪಳ ಜಿಲ್ಲಾ ಉತ್ಸವವು ಅತ್ಯಂತ ಯಶಸ್ವಿಯಾಗಿ ಜರುಗಲಿ. ಈ ಐದು ದಿನಗಳ ಕಾಲ ನಡೆಯವ ಉತ್ಸವದಲ್ಲಿ ಒಂದು ದಿನ ಡಾ. ಸಿದ್ಧಯ್ಯ ಪುರಾಣಿಕ ಸ್ಮಾರಕ ಟ್ರಸ್ಟ್‌ನ ಸಹಯೋಗದಲ್ಲಿ ಅವರ ಕುರಿತು ಉಪನ್ಯಾಸ, ಕವಿಗೋಷ್ಠಿ, ಗಾಯನ, ನೃತ್ಯರೂಪಕ ಪುಸ್ತಕ ಪ್ರದರ್ಶನ ಹಾಗೂ ಪ್ರಶಸ್ತಿ ಪ್ರದಾನ ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ. ಜಿಲ್ಲಾ ಉತ್ಸವದಲ್ಲಿ ಅವರ ವಚನಗಳ ಸಾರವನ್ನು ಪ್ರಚಾರಪಡಿಸಲು ಸೂಕ್ತವೇದಿಕೆ ನಿರ್ಮಿಸಿ, ಜಿಲ್ಲಾ ಉತ್ಸವದಲ್ಲಿ ಡಾ.ಸಿದ್ಧಯ್ಯ ಪುರಾಣಿಕರ ವಚನ ಸಾಹಿತ್ಯದ ಮೇಲೆ ಬೆಳಕು ಚೆಲ್ಲಲಿ ಎಂದು ಕೊಪ್ಪಳದ ಹಿರಿಯ ಸಾಹಿತಿಗಳಾದ ಡಾ. ಮಹಾಂತೇಶ ಮಲ್ಲನಗೌಡರ ಅವರು ಹೇಳಿದರು.



ಅವರು ರವಿವಾರ ಕೊಪ್ಪಳ ಪ್ರವಾಸಿ ಮಂದಿರದಲ್ಲಿ ಕೊಪ್ಪಳ ಜಿಲ್ಲಾ ಉತ್ಸವದ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದರು. ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆಯಿಂದ ನಿರಂತರವಾಗಿ ಕಳೆದ ಐದಿನ್ನೈದು ವರ್ಷಗಳಿಂದ ಜಿಲ್ಲಾ ಉತ್ಸವವನ್ನು ನಡೆಸಿಕೊಂಡು ಬಂದಿರುವುದು ಈ ಭಾಗದ ಸಂಸ್ಕೃತಿ–ಪರಂಪರೆಯ ಅನಾವರಣದ ಜೊತೆಗೆ ಕಲ್ಯಾಣ ಕರ್ನಾಟಕದ ಸಾಹಿತಿ ಹಾಗೂ ಕಲಾವಿದರಿಗೆ ಸೂಕ್ತ ವೇದಿಕೆಯನ್ನು ನೀಡಿ ಪ್ರತಿಭಾ ಪೋ಼ಷಣೆ ಮತ್ತು ಕಲಾಪೋಷಣೆ ಮಾಡುತ್ತಿರುವುದು ಅಭಿನಂದನೀಯ. ಈ ಬಾರಿ ಜಿಲ್ಲೆಯವರೆಯಾದ ಶಿವರಾಜ ತಂಗಡಗಿಯವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಆಗಿದ್ದು ಜಿಲ್ಲೆಗೆ ಹೆಚ್ಚಿನ ಅನುದಾನ ಮತ್ತು ಯೋಜನೆಗಳನ್ನ ನೀಡಿ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಲಿ ಎಂದರು. ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹನುಮಂತಪ್ಪ ಅಂಡಗಿ ಚಿಲವಾಡಗಿ ಮಾತನಾಡುತ್ತಾ, ಕೊಪ್ಪಳ ಜಿಲ್ಲೆಯ ಸಾಹಿತಿಗಳು ಮತ್ತು ಕವಿಗಳು ಜಿಲ್ಲಾ ಉತ್ಸವದಲ್ಲಿ ಉತ್ಸಾಹದದಿಂದ ಪಾಲ್ಗೊಂಡು ಜಿಲ್ಲೆಯ ಸಾಹಿತ್ಯ ಪರಂಪರೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುವುದರ ಮೂಲಕ ಕೊಪ್ಪಳ ಜಿಲ್ಲೆಯ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಶ್ರಮಿಸಲಿ ಎಂದರು.

ಉತ್ಸವದ ಸಂಘಟಕ ಮತ್ತು ಸಂಚಾಲಕರಾದ ಮಹೇಶಬಾಬು ಸುರ್ವೆಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ನಮ್ಮ ಜಿಲ್ಲೆ ನಮ್ಮ ಹೆಮ್ಮೆ ಎಂಬ ಘೋಷಣೆ ಅಡಿಯಲ್ಲಿ ಕೊಪ್ಪಳ ಜಿಲ್ಲಾ ಉತ್ಸವವನ್ನು ಸ್ವಾಭಿಮಾನದ ಸಂಕೇತವಾಗಿ ನಿರಂತರವಾಗಿ ನಡೆಸಿಕೋಡು ಬರುತ್ತಿರುವುದಾಗಿ ಹೇಳಿದರು. ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆಯ ಗೌರವಾಧ್ಯಕ್ಷರಾದ ಎಂ.ಬಿ.ಅಳವಂಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತರಾದ ಸಿದ್ದು ಹಿರೇಮಠ, ಶಿವಕುಮಾರ ಹಿರೇಮಠ, ಉಮೇಶ ಪೂಜಾರ, ರಥಶಿಲ್ಪಿ ಯಲ್ಲಪ್ಪ ಬಡಿಗೇರ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪತ್ರಕರ್ತರಾದ ಜಿ.ಎಸ್. ಗೋನಾಳ ನಿರೂಪಿಸಿದರು. ಪತ್ರಕರ್ತರಾದ ವೈ.ಬಿ.ಜೂಡಿ ಸ್ವಾಗತಿಸಿದರು. ಪತ್ರಕರ್ತರಾದ ಎಂ. ಸಾದಿಕ ಅಲಿ ವಂದಿಸಿದರು.

## ಪರಾರಿಯಾಗಿದ್ದ ಕಾರ್ ಚಾಲಕ ಅರ್ಧಗಂಟೆಯಲ್ಲಿ ಸೆರೆ

# ಪಾದಚಾರಿಗಳಿಗೆ ಕಾರ್ ಡಿಕ್ಕಿ; ಇಬ್ಬರು ಸ್ಥಳದಲ್ಲಿಯೇ ಸಾವು

**■ ವಿಜಯಸಾಕ್ಷಿ ಸುದ್ದಿ, ಹಾವೇರಿ**

ರಸ್ತೆ ದಾಟುತ್ತಿದ್ದವರ ಮೇಲೆ ಕಾರ್ ಹರಿದ ಪರಿಣಾಮವಾಗಿ ಇಬ್ಬರು ಪಾದಚಾರಿಗಳು ಸ್ಥಳದಲ್ಲಿಯೇ ಮೃತಪಟ್ಟ ದಾರುಣ ಘಟನೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂದು ಮುಂಜಾನೆ ಜರುಗಿದೆ.

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ತಿಮ್ಮಾಪೂರ ಕ್ರಾಸ್ ಬಳಿ ನಡೆದ ಈ ದುರ್ಘಟನೆಯಲ್ಲಿ ಶಿಗ್ಗಾವಿ ತಾಲೂಕಿನ ನೀರಲಗಿ ಗ್ರಾಮದ ಚಿದಾನಂದ ಹಾಗೂ ವಿರೂಪಾಕ್ಷಪ್ಪ ಎಂಬುವರು ಮೃತಪಟ್ಟಿದ್ದಾರೆ.

ಪಾದಚಾರಿಗಳಿಗೆ ಕಾರು ಡಿಕ್ಕಿ ಹೊಡೆದರೂ ಕಾರ್ ನಿಲ್ಲಸದೇ ಪರಾರಿಯಾಗಿದ್ದ ಚಾಲಕನನ್ನು ಅರ್ಧ ಗಂಟೆಯಲ್ಲಿಯೇ ಶಿಗ್ಗಾವಿ ಪೊಲೀಸರು ಬಂಧಿಸಿದ್ದಾರೆ.

ಕಾರು ಬೆಳಗಾವಿ ಮೂಲದ್ದು ಎಂದು ಪೊಲೀಸರು ತಿಳಿಸಿದ್ದು,



ಅಪಘಾತ ಸಂಭವಿಸುತ್ತಿದ್ದಂತೆಯೇ ಸ್ಥಳೀಯರು ಜಮಾವಣೆಗೊಂಡು ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಶಿಗ್ಗಾವಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

**ನೀವೂ ನಮ್ಮ ಜೊತೆ ಕೈಜೋಡಿಸಿ**
**‘ವಿಜಯಸಾಕ್ಷಿ’**
ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಸಂದಿಗ್ಧದಲ್ಲೂ ವೃತ್ತಿ ನಿರತರಾದ ನೇಕಾರರಿಗೆ ಸಲಾಂ

▶▶ ಮೊದಲನೇ ಪುಟದಿಂದ

ಬೆಟಗೇರಿಯಲ್ಲಿನ ಕೆಹೆಚ್‌ಟಿಐನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅಧ್ಯಯನದೊಂದಿಗೆ ಉದ್ಯೋಗಾವಕಾಶಗಳ ಸೃಷ್ಟಿಗೆ ರಾಜ್ಯ ಸರಕಾರಕ್ಕೆ ವರದಿ ಸಲ್ಲಿಸುವ ಕಾರ್ಯವಾಗಬೇಕು. ಇಂದು ಸೀರೆ ತೊಡುವವರ ಸಂಖ್ಯೆ ಕಡಿಮೆಯಾದರೂ ಕೈಮಗ್ಗದಿಂದ ಸೀರೆಯ ಜೊತೆಗೆ ಕಿಟಕಿ ಪರದೆ ಹಾಗೂ ಬೆಡಶೀಟ್‌ಗಳಿಗೆ ತುಂಬಾ ಬೇಡಿಕೆ ಇದ್ದು ಈ ಕುರಿತು ಚಿಂತನೆ ನಡೆಸಲು ಸಲಹೇ ನೀಡಿದ ಸಚಿವರು, ಕೈಮಗ್ಗ ನೇಕಾರರ ಸಂಖ್ಯೆ ಕಡಿಮೆ ಇದ್ದು ಅವರ ಹಾಗೂ ಅವರ ವೃತ್ತಿ ಸುಧಾರಣೆಗೆ ಉತ್ತೇಜನೆ ನೀಡುವ ಕಾರ್ಯಮಾಡಬೇಕಾಗಿದೆ ಎಂದು ಹೇಳಿದರು.

ನೀಡಿತ್ತು. ಆದರೆ ದುರಾದೃಷ್ಟವೆಂದರೆ, ಆಧುನಿಕ ದಿನಮಾನಗಳಲ್ಲಿ ತಾಂತ್ರಿಕತೆ ಬೆಳೆದಂತೆ ಕೈಮಗ್ಗ ನೇಕಾರಿಕೆ ಅವನತಿಯತ್ತ ಸಾಗಿದೆ. ಕೈಮಗ್ಗ ನೇಕಾರಿಕೆ ವೃತ್ತಿಯನ್ನು ಅವಲಂಬಿಸಿದ ನೇಕಾರರು ಬಡತನದಲ್ಲಿ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಕೈಮಗ್ಗದಲ್ಲಿ ನೈಪುಣ್ಯತೆ ಹೊಂದಿದ ಬೆರಳಣಿಕೆಯಷ್ಟು ಜನ ಇಂದಿಗೂ ಸಹ ಅದನ್ನೇ ಅವಲಂಬಿಸಿದ್ದಾರೆ. ವೃತ್ತಿ ನೈಪುಣ್ಯತೆಯೊಂದಿಗೆ ಆಧುನಿಕ, ತಾಂತ್ರಿಕ ಯಂತ್ರೋಪಕರಣಗಳ ಬಳಕೆ ಮಾಡುವದರ ಮೂಲಕ ವೃತ್ತಿಯಲ್ಲಿ ನಿರಂತರವಾಗಿ ಮುಂದೆ ಸಾಗಬೇಕಿದೆ. ರಾಜ್ಯದಲ್ಲಿ ಅಂದಾಜು 24 ಸಾವಿರದಷ್ಟು ಇದ್ದ ಕೈಮಗ್ಗಗಳ ಸಂಖ್ಯೆ ಇಂದು ಕೇವಲ 2 ಸಾವಿರಕ್ಕೆ ಬಂದಿರುವದು ಎಲ್ಲರೂ ಚಿಂತಿಸಬೇಕಾದ ಸಂಗತಿಯಾಗಿದೆ ಎಂದು ಖೇದ ವ್ಯಕ್ತಪಡಿಸಿದರು.

ವಿ ಪ ಸದಸ್ಯ ಎಸ್ ವಿ ಸಂಕನೂರ ಮಾತನಾಡಿ, ಸಮಾಜಕ್ಕೆ ನೇಕಾರರ ಕೊಡುಗೆ ಅಪಾರವಾಗಿದೆ. ಒಂದು ಕಾಲದಲ್ಲಿ ಭಾರತವು ಕೈಮಗ್ಗದ ತವರೂರಾಗಿತ್ತು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆ ಜಾರಿಗೊಳಿಸಿದರೆ, ಬಸವರಾಜ ಬೊಮ್ಮಾಯಿ ನೇತೃತ್ವದ ಹಿಂದಿನ ರಾಜ್ಯ ಸರ್ಕಾರ ನೇಕಾರ ಸಮ್ಮಾನ್ ಯೋಜನೆ ಜಾರಿಗೊಳಿಸುವ ಮೂಲಕ ನೇಕಾರರಿಗೆ ಸಹಕಾರಿಯಾಗಿತ್ತು. 2015ರಿಂದ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯನ್ನು ಆಚರಣೆಗೆ ತರಲಾಗಿದೆ. ಸರಕಾರದಿಂದ ನೇಕಾರರಿಗೆ ಸಾಧ್ಯವಾದಷ್ಟು ಸೌಲಭ್ಯಗಳನ್ನು ಒದಗಿಸಲು ಕೋರಿದ ಸಂಕನೂರ, ನೇಕಾರರು ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಉತ್ತಮ ಶಿಕ್ಷಣ ನೀಡುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್, ನೇಕಾರ ಸೇವಾ ಕೇಂದ್ರದ ತಾಂತ್ರಿಕ ಅಧೀಕ್ಷಕರಾದ ಮೋಹನ, ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕ ಹೆಚ್ ಬಿ ಪಾಟೀಲ, ಸಹಾಯಕ ನಿರ್ದೇಶಕ ಮಂಜುನಾಥ ಅಮ್ರದ, ವಿವಿಧ ತಾಲೂಕುಗಳಿಂದ ಆಗಮಿಸಿದ ನೇಕಾರರು ಉಪಸ್ಥಿತರಿದ್ದರು. ಕೈಮಗ್ಗ ಮತ್ತು ಜವಳಿ ಇಲಾಖೆ ಅಪರ ನಿರ್ದೇಶಕ ಎಸ್ ಪ್ರಕಾಶ ಪ್ರಾಸ್ತಾವಿಕವಾಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಕೈಮಗ್ಗ ನೇಕಾರರಾದ ತಿಪ್ಪಣ್ಣ ಕೊಂಗತಿ, ಲಕ್ಷ್ಮಣ ಗುರುಲಿಂಗಪ್ಪ ಕಾಳೂರ, ಶರಣಪ್ಪ ಹುಣಚೇರಿ, ಈರಪ್ಪ ಸಂಕನೂರ, ಧರ್ಮಣ್ಣಾ ಬುಳ್ಳಾ, ಮಲ್ಲಪ್ಪ ಚಾವಡಿ, ದೇವೆಂದ್ರಪ್ಪ ಹೊಟ್ಟಿ, ವೆಂಕಟೇಶ ತಟ್ಟೆ ಅವರುಗಳನ್ನು ಸಚಿವರು ಹಾಗೂ ಗಣ್ಯರು ಸನ್ಮಾನಿಸಿದರು.

## ಬಸ್ ಏರಲು ಪ್ರಯಾಣಿಕರ ಪರದಾಟ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಗಾಂಧಿ ಸರ್ಕಲ್ ಹಾಗೂ ನೋಂದಣಿ ಕಚೇರಿ ನಡುವೆ ನೂತನವಾಗಿ ನಿರ್ಮಿಸಲಾದ ಗಾಂಧಿ ಸರ್ಕಲ್ ಬಸ್ ನಿಲ್ದಾಣವು ತುಂಬಾ ಚಿಕ್ಕದಾಗಿರುವ ಕಾರಣ, ಬಸ್ಸುಗಳನ್ನು ಏರಲು ಪ್ರಯಾಣಿಕರು ಪರದಾಡುತಿದ್ದಾರೆ. ಪ್ರಯಾಣಿಕರ ಸಂಖ್ಯೆಗೆ ಮತ್ತು ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಲು ಹಾಗೂ ಮೂಲಸೌಕರ್ಯವನ್ನು ಒದಗಿಸಲು ಸಂಬಂಧ ಪಟ್ಟ ಇಲಾಖೆಯವರು ಮುಂದಾಗಬೇಕು ಎಂದು ಮಾನವ ಹಕ್ಕುಗಳ ಜಾಗೃತಿ ಸಮಿತಿಯ ಜಿಲ್ಲಾ ಘಟಕದ ಅಧ್ಯಕ್ಷ ವಿನಾಯಕ ಜರತಾರಿ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಈ ಹಿಂದೆ ಗಾಂಧಿ ಸರ್ಕಲ್ ಬಳಿಯ ಮಳಿಗೆಗಳ ಮುಂದೆ ಬಸ್ಸುಗಳು ನಿಲ್ಲುತ್ತಿದ್ದವು. ಆದರೆ ಅಲ್ಲಿ ಜನಜಂಗುಳಿ ಹೆಚ್ಚಾದ ಕಾರಣ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದೆ. ಆದರೆ ಇಲ್ಲಿನ ಬಸ್ ನಿಲ್ದಾಣ ಚಿಕ್ಕದಾಗಿದ್ದು, ಹೆಚ್ಚಿನ ಪ್ರಯಾಣಿಕರು ನಿಲ್ಲಲು ಆಗುವುದಿಲ್ಲ. ಮೂಲ ಸೌಕರ್ಯಗಳೂ ಇಲ್ಲದಿರುವುದರಿಂದ ತೊಂದರೆ ಅನುಭವಿಸುವಂತಾಗಿದೆ.

ಈ ಕೂಡಲೇ ಬಸ್ ನಿಲ್ದಾಣವನ್ನು ವಿಸ್ತರಿಸಿ ನಿರ್ಮಾಣ ಮಾಡಬೇಕು. ಪ್ರಯಾಣಿಕರ ಸಮಸ್ಯೆಯನ್ನು ಪರಿಹರಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.



## ಖರ್ಚಿಲ್ಲದ ಅಲ್ಪಾವಧಿ ಬೆಳೆಗೂ ಅಧಿಕ ಖರ್ಚಿನ ಅನಿವಾರ್ಯತೆ

# ಹೆಸರಿಗೀಗ ಕೊಂಬಿನ ಹುಳು ಕೀಟಬಾಧೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ರೈತರ ಮುಂಗಾರಿನ ಪ್ರಮುಖ ವಾಣಿಜ್ಯ ಬೆಳೆ ಹೆಸರಿಗೆ ಕೊಂಬಿನ ಹುಳು ಕೀಟಭಾದೆ ಆವರಿಸಿದ್ದು, ಬೆಳೆ ಉಳಿಸಿಕೊಳ್ಳಲು ರೈತರು ಹೆಣಗಾಡುತ್ತಿದ್ದಾರೆ. ಮುಂಗಾರಿನಲ್ಲಿ ಮೊದಲು ರೈತರ ಕೈಸೇರುವ ಹೆಸರು ಬೆಳೆ ರೈತರ ಆಶಾದಾಯಕ ಬೆಳೆಯಾಗಿದೆ. ಆದರೆ ಪ್ರಸಕ್ತ ಮುಂಗಾರಿನ ಮೊದಲ ಮಳೆಗಳು ಕೈಕೊಟ್ಟದ್ದರಿಂದ ಹೆಸರು ಬಿತ್ತನೆಗೆ ವಿಳಂಬವಾಯಿತು. ಸರ್ಕಾರ ಪ್ರತಿ ಕ್ವಿಂಟಲ್ ಹೆಸರಿಗೆ 8,558 ರೂ ಬೆಂಬಲ ಘೋಷಣೆ ಮಾಡಿದ್ದರಿಂದ ಕಡಿಮೆ ಇಳುವರಿ ಬಂದರೂ ಸರಿ, ಕಡಿಮೆ ಅವಧಿ ಮತ್ತು ಉತ್ತಮ ಬೆಲೆ ಸಿಗುತ್ತದೆಂಬ ಕಾರಣದಿಂದ ತಾಲೂಕಿನಲ್ಲಿ ಹೆಸರು ಬಿತ್ತನೆ ಮಾಡಿದ್ದಾರೆ. ಆದರೆ ಒಂದು ತಿಂಗಳ ಕಾಲಾವಧಿಯ ಹೆಸರು ಬೆಳೆಗೆ ಸಂಪ್ರದಾಯವೆಂಬಂತೆ ಹಳದಿ ರೋಗದ ಜತೆಗೆ ಕೀಟಬಾಧೆಯೂ ಆರಂಭವಾಗಿರುವುದು ಕಂಗಾಲಾಗಿಸಿದೆ.

ಕಳೆದೊಂದು ವಾರದಿಂದ ಮಳೆ ಬಿಡುವು ಕೊಟ್ಟಿದ್ದರಿಂದ ಕೃಷಿ ಕೆಲಸಗಳು ಏಕಕಾಲಕ್ಕೆ ಪ್ರಾರಂಭವಾಗಿ ಎಡೆ ಹೊಡೆಯಲು, ಕಳೆ ತೆಗೆಯಲು, ಕ್ರಿಮಿನಾಶ ಸಿಂಪಡಣೆ ಮಾಡಲು ಎತ್ತು, ಕೃಷಿ ಕಾರ್ಮಿಕರ ಕೊರತೆ ಕಾಡುತ್ತಿದೆ.



ಈ ನಡುವೆಯೂ ಕೀಟಬಾಧೆಗೆ ತುತ್ತಾಗಿರುವ ಬೆಳೆಗಳ ಸಂರಕ್ಷಣೆಗೆ ಯಂತ್ರೋಪಕರಣಗಳಿಗೆ ಮೊರೆ ಹೋಗಿದ್ದಾರೆ. ಇದರಿಂದ ಈ ವರ್ಷವೂ ಖರ್ಚಿಲ್ಲದ ಬೆಳೆಗೆ ಮತ್ತೆ ಹೆಚ್ಚು ಖರ್ಚಿನ ಚಿಂತೆಯೊಂದಿಗೆ ಇಳುವರಿ ಕುಂಠಿತವಾಗುವ ಆತಂಕ ಮೂಡಿದೆ.

ಈ ವರ್ಷ ಸರ್ಕಾರ 8,858 ರೂ ಬೆಂಬಲ ಬೆಲೆ ಘೋಷಣೆ ಮಾಡಿದ್ದು, ಮುಕ್ತ ಮಾರುಕಟ್ಟೆಯಲ್ಲೂ ಉತ್ತಮ ಬೆಲೆ ಇರುವುದರಿಂದ ತಡವಾದರೂ ಹೆಸರು ಬೆಳೆದಿದ್ದೇವೆ. ಅದಕ್ಕಾಗಿ ಈಗಾಗಲೇ ಎಕರೆಗೆ 10 ಸಾವಿರಕ್ಕಿಂತ ಹೆಚ್ಚು ಖರ್ಚು ಮಾಡಿದ್ದೇವೆ. ಬೆಳೆಗೆ ರೋಗ ತಪ್ಪಿದ್ದಲ್ಲ ಎಂದು ಗೊತ್ತಿದ್ದರೂ ಈ ವರ್ಷ ಹೇಗಾದರೂ ಸರಿ ಕೃಷಿ ಇಲಾಖೆಯ ಸಲಹೆ-ಸೂಚನೆ ಪಾಲಿಸಿ ಬೆಳೆಯನ್ನು ರೋಗದಿಂದ ಕಾಪಾಡಬೇಕು ಎಂದುಕೊಂಡಿದ್ದೇವೆ. ಆದರೆ ಹಳದಿ ರೋಗಬಾಧೆ ಕಡಿಮೆ ಇದ್ದರೂ ಅದ್ಯಾವುದೋ ಕೊಂಬಿನ ಹುಳದ ಬಾಧೆ ಆವರಿಸಿರುವುದು ರೈತರ ಕಷ್ಟಕ್ಕೆ ಕೊನೆಯೇ ಇಲ್ಲದಂತಾಗಿದೆ. ಸರ್ಕಾರ ಮುಂಗಾರಿನ ಬೆಳೆಗೆ ಬೆಳೆವಿಮೆ, ಬೆಳೆಹಾನಿ ಪರಿಹಾರ ಕಲ್ಪಿಸಬೇಕು.

**– ಚನ್ನಪ್ಪ ಷಣ್ಮುಕಿ, ಟಾಕಪ್ಪ ಸಾತಪುತೆ.**
ರೈತ ಮುಖಂಡರು.

ಹೆಸರು ಬೆಳೆಗೆಗೆ ಅಲ್ಲಲ್ಲಿ ಕೊಂಬಿನಹುಳು ಬಾಧೆ ಆವರಿಸುತ್ತಿದೆ. ರೈತರ ಜಮೀನುಗಳಿಗೆ ಭೇಟಿ ನೀಡಿ ಬೆಳೆ ಪರಿಶೀಲಿಸಿ ಸಲಹೆ-ಸೂಚನೆ ನೀಡುತ್ತಿದ್ದೇವೆ. ಹಸಿರು ಬಣ್ಣದ ಮತ್ತು ದೇಹದ ಹಿಂಭಾಗಲ್ಲಿ ಚೂಪಾದ ಕೊಂಬನ್ನು ಹೊಂದಿರುತ್ತದೆ. ಎಲೆಗಳ ಕೆಳಗಿರುವ ಕೀಟವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಪ್ರಾರಂಭದ ಹಂತದಲ್ಲಿಯೇ ಗುರುತಿಸಬೇಕು. ಹೆಸರು, ಉದ್ದು ಬೆಳೆಯಲ್ಲಿ ಹೆಚ್ಚಾಗಿ ಕಂಡುಬರುವ ಈ ಕೀಟ ಎಲೆಯನ್ನೇ ತಿನ್ನುತ್ತದೆ. ಪ್ರತಿ ಲೀ. ನೀರಿಗೆ 4 ಗ್ರಾಂ ಕಾರ್ಬರಿಲ್ 50 ಡಬ್ಲ್ಯೂ.ಪಿ ಅಥವಾ 2 ಮಿ.ಲೀ ಕ್ಲೋರೊಪೈರಿಫಾಸ್ 20 ಇ.ಸಿ ಬೆರೆಸಿ ಸಿಂಪಡಿಸಬೇಕು. ನೀರಿನ ಅಭಾವವಿದ್ದಲ್ಲಿ ಪ್ರತಿ ಎಕರೆಗೆ 8 ಕಿಲೋದಂತೆ ಕ್ವಿನಾಲ್‌ಫಾಸ್ ಅಥವಾ ಫೆನವಲರೇಟ್ ಧೂಳೀಕರಣ ಮಾಡಬೇಕು. ಮುಖ್ಯವಾಗಿ ಮುಂಗಾರಿನ ಬೆಳೆಗಳನ್ನು ಬೆಳೆದರ್ಶಕ ಆಪ್‌ನಲ್ಲಿ ದಾಖಲೀಕರಣ ಮಾಡಬೇಕು. ಇದರಿಂದ ಬೆಂಬಲ ಬೆಲೆಯಡಿ ಮಾರಾಟ ಮಾಡಲು, ಬೆಳೆವಿಮೆ ಪಾವತಿಸಲು, ಬೆಳೆವಿಮೆ ಮತ್ತು ಬೆಳೆಹಾನಿ ಪರಿಹಾರ ಪಡೆಯಲು ಅನಕೂಲವಾಗುತ್ತದೆ.

**– ಚಂದ್ರಶೇಖರ ನರಸಮ್ಮನವರ.**
ಕೃಷಿ ಅಧಿಕಾರಿ.

ಲಕ್ಷ್ಮೇಶ್ವರ ಸೇರಿದಂತೆ ತಾಲೂಕಿನ ಶಿಗ್ಲಿ, ದೊಡ್ಡೂರ, ಸೂರಣಗಿ, ಬಾಲೆಹೊಸೂರ, ಅಕ್ಕಿಗುಂದ, ಬಡ್ನಿ, ಬಟ್ಟೂರ, ಹರದಗಟ್ಟಿ, ಅಡರಕಟ್ಟಿ, ಗೊಜನೂರ ಬಹುತೇಕ ಕಪ್ಪು ಮಣ್ಣಿನ 8,025 ಎಕರೆ ಪ್ರದೇಶದಲ್ಲಿ ಹೆಸರು ಬಿತ್ತನೆಯಾಗಿದೆ. ರೈತ ಸಂಪರ್ಕ ಕೇಂದ್ರ(45 ಕ್ವಿಂಟಲ್) ಮತ್ತು ಖಾಸಗಿ ಬೀಜ ಮಾರಾಟ ಕೇಂದ್ರದಲ್ಲಿ ನೂರಾರು ಕ್ವಿಂಟಲ್ ಹೆಸರು ಬೀಜ ಮಾರಾಟವಾಗಿದೆ. ಮುಖ್ಯವಾಗಿ ಯಂತ್ರ ಕಟಾವಿಗೆ ಅನುಕೂಲವಾಗುವ ಎತ್ತರ ತಳಿಯ ದುಬಾರಿ ಬೀಜ ಬಿತ್ತನೆ ಮಾಡಲಾಗಿದೆ.

## ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಕ್ರೀಡೆಗಳ ಪಾತ್ರ ಮಹತ್ವದ್ದು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಆರೋಗ್ಯಕರ, ಸದೃಢವಾದ ಸಮಾಜ ನಿರ್ಮಾಣದಲ್ಲಿ ಕ್ರೀಡೆಗಳ ಪಾತ್ರ ಮಹತ್ವದ್ದಾಗಿದ್ದು ವಿದ್ಯಾರ್ಥಿಗಳು ಪ್ರಾಥಮಿಕ ಶಾಲಾ ಹಂತದಲ್ಲಿಯೇ ಕ್ರೀಡೆಯನ್ನು ನಿತ್ಯದ ಬದುಕಿನ ಅಂಗವಾಗಿಸಿಕೊಳ್ಳಬೇಕು ಎಂದು ಬಿಇಓ ಜಿ.ಎಂ ಮುಂದಿನಮನಿ ಹೇಳಿದರು.



ಅವರು ಸೋಮವಾರ ಪಟ್ಟಣದ ಲಿಟಲ್ ಹಾರ್ಟ್ಸ್ ಇಂಟರ್ ನ್ಯಾಶನಲ್ ಸ್ಕೂಲ್‌ನಲ್ಲಿ ನಡೆದ ಪ್ರೌಢಶಾಲಾ ಹಂತದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಪರಿಣಾಮಾತ್ಮಕ ಕಲಿಕೆಗೆ ಕ್ರೀಡೆಗಳು ಪೂರಕವಾಗಿವೆ. ಕ್ರೀಡೆಯಿಂದ ವಿದ್ಯಾರ್ಥಿಗಳಲ್ಲಿ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯ ವೃದ್ಧಿಯಾಗುತ್ತದೆ. ಸೋಲು ಗೆಲುವು ಮುಖ್ಯವಲ್ಲ ಎಲ್ಲ ವಿದ್ಯಾರ್ಥಿಗಳು ಕ್ರೀಡಾ ಮನೋಭಾವದಿಂದ ಪಾಲ್ಗೊಳ್ಳಬೇಕು . ಮಕ್ಕಳಲ್ಲಿ ಕ್ರೀಡಾ ಆಸಕ್ತಿ ಮೂಡಿಸುವಲ್ಲಿ ಶಿಕ್ಷಕರಷ್ಟೇ ಅಲ್ಲದೇ ಪಾಲಕರ ಪಾತ್ರವೂ ಮುಖ್ಯವಾಗಿರುತ್ತದೆ ಎಂದರು.

ಈ ವೇಳೆ ಕ.ರಾ.ಪ್ರಾ.ಶಾ.ಶಿ. ಸಂಘ ತಾಲೂಕಾಧ್ಯಕ್ಷ ಬಿ.ಎಸ್ ಹರ್ಲಾಪುರ, ಶಾಲೆಯ ಅಧ್ಯಕ್ಷ ರಾಮೇಶ್ವರ ಶಿರಹಟ್ಟಿ, ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕಾಧ್ಯಕ್ಷ ಡಿ.ಎಚ್ ಪಾಟೀಲ ಅವರು ಕ್ರೀಡಾಕೂಟದಿಂದ ಸ್ನೇಹ-ಬಾಂಧವ್ಯ ಬೆಸೆಯುವ ಜತೆಗೆ ಸ್ಪರ್ಧಾತ್ಮಕ ಹಾಗೂ ನಾಯಕತ್ವದ ಗುಣ ಬೆಳೆಯುತ್ತದೆ ಎಂಬ ಕ್ರೀಡೆಯ ಮಹತ್ವದ ಕುರಿತು ಮಾತನಾಡಿದರು.

ಗಂಗಾಧರ ಶಿರಹಟ್ಟಿ ಪ್ರಸ್ತಾವಿಕವಾಗಿ ಮಾತನಾಡಿದರು. ಬಿಆರ್‌ಪಿ ಈಶ್ವರ ಮೆಡ್ಲೇರಿ. ಬಿ.ಎಂ ಯರಗುಪ್ಪಿ, ಸಿಆರ್‌ಪಿ ಉಮೇಶ ನೇಕಾರ. ಚಂದ್ರು ನೇಕಾರ. ಎನ್.ಎ ಮುಲ್ಲಾ. ಸತೀಶ ಬೋಮಲೆ ಸೇರಿ ವಿವಿಧ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಇಂದ್ರಧನುಷ್ 5.0 ಅಭಿಯಾನ ಯಶಸ್ವಿಗೊಳಿಸಿ

▶▶ ಮೊದಲನೇ ಪುಟದಿಂದ

ಕೆಸಿಸಿ ಬ್ಯಾಂಕ್ ನಿರ್ದೇಶಕ ಸುನೀಲ ಮಹಾಂತಶೆಟ್ಟರ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ, 5 ವರ್ಷದೊಳಗಿನ ಮಕ್ಕಳು ಮತ್ತು ಬಾಣಂತಿಯರು ಲಸಿಕೆ ಹಾಕಿಸಿಕೊಳ್ಳಬೇಕು ಎಂದರು. ಲಕ್ಷ್ಮೇಶ್ವರ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಶ್ರೀಕಾಂತ ಕಾಟೇವಾಲೆ, ಪುರಸಭೆ ಸದಸ್ಯ ಮಹಾದೇವಪ್ಪ ಅಣ್ಣಿಗೇರಿ, ಸಿಡಿಪಿಓ ಮೃತ್ಯುಂಜಯ ಗುಡ್ಡದನ್ವೇರಿ ಮಾತನಾಡಿದರು. ಹಿರಿಯ ಆರೋಗ್ಯ ಸಹಾಯಕ ಬಿ ಎಸ್ ಹಿರೇಮಠ ಲಸಿಕೆಯ ಮಹತ್ವ ತಿಳಿಸಿದರು. ನಂದಾ ನವಲೆ, ಕೊಟ್ರಮ್ಮ ಮರಳಿಹಳ್ಳಿ, ರೂಪಾ ಕಟ್ಟಿಮನಿ ಸೇರಿ ಅಂಗನವಾಡಿ ಕಾರ್ಯಕರ್ತರು ಇದ್ದರು.

## ಏಕಾಗ್ರತೆಯಿಂದ ಓದಿದಾಗ ಶಿಕ್ಷಣದಲ್ಲಿ ಉತ್ತಮ ಅಂಕಗಳಿಕೆ ಸಾಧ್ಯ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ವಿದ್ಯಾರ್ಥಿಗಳು ತಾವು ಆಯ್ದುಕೊಂಡ ಯಾವುದೇ ವಿಭಾಗದ ಶಿಕ್ಷಣದಲ್ಲಿ ಉತ್ತಮ ಅಂಕ ಗಳಿಕೆಗೆ ಏಕಾಗ್ರತೆಯ ಓದು, ಉದ್ದೇಶಿತ ಗುರಿ ಸಾಧನೆಯತ್ತ ಚಿತ್ತ ಹರಿಸಿ ಸತತಾಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಬಿಸಿಎನ್ ವಿದ್ಯಾಸಂಸ್ಥೆಯ ನಿರ್ದೇಶಕ ಲೋಹಿತ್ ನೆಲವಿಗಿ ಹೇಳಿದರು.




ಅವರು ಬಿಸಿಎನ್ ವಿದ್ಯಾಸಂಸ್ಥೆಯ ಬಿಸಿಎನ್ ಸಿರಿ ಪದವಿ ಮಹಾವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಪದವಿ ಮುಗಿದ ತಕ್ಷಣ ಕೆಲವರು ಉದ್ಯೋಗದತ್ತ ಮತ್ತೆ ಕೆಲವರು ಉನ್ನತ ವಿದ್ಯಾಭ್ಯಾಸದತ್ತ ಹೋಗುತ್ತಾರೆ. ಅಂಕ ಗಳಿಕೆಯ ಜತೆಗೆ ವಿದ್ಯಾರ್ಥಿಗಳು ವಿಶೇಷ ಕೌಶಲ್ಯ ಹೊಂದುವುದರಿಂದ ಅವಕಾಶಗಳು ಹೆಚ್ಚು ಸಿಗುತ್ತವೆ. ಸಂಸ್ಥೆಯಲ್ಲಿ ಪದವಿ ಪೂರೈಸಿದ ವಿದ್ಯಾರ್ಥಿಗಳ ಭವಿಷ್ಯದ ಜೀವನ ಉಜ್ವಲವಾಗಲಿ ಎಂದರು.

ಸಂಸ್ಥೆಯ ಪ್ರಾಚಾರ್ಯರಾದ ಪ್ರೊ. ವಿಜಯಕುಮಾರ, ಪ್ರೊ.ಡಿ.ಎಸ್.ಪ್ಯಾಟಿ ಮಾತನಾಡಿದರು. ಅಂತಿಮ ವರ್ಷದ ವಿದ್ಯಾರ್ಥಿಗಳು ತಮ್ಮ ಸವಿನೆನಪು, ಸಂಸ್ಥೆಯ ಬಗ್ಗೆ ಅಭಿಮಾನ ವ್ಯಕ್ತಪಡಿಸಿದರು. ಈ ವೇಳೆ ಡಿ.ಎಂ.ಪೂಜಾರ, ಅಜಮೀರ್ ಹಾರೋಗೇರಿ, ಖುಷಾ ಅರಳಿ, ಪ್ರೀತಿ ಕಬ್ಬೂರ, ಮಂಜುನಾಥ ಬಂಡಿವಾಡ, ಅಭಿಲಾಷ್, ಸುಜಾತಾ ಹಲವರಿದ್ದರು. ವಿದ್ಯಾರ್ಥಿಗಳಾದ ದರ್ಶನ್, ಭವ್ಯಶ್ರೀ, ಅಕ್ಷಯ ನಿರೂಪಿಸಿದರು.

## ಅತಿಥಿ ಉಪನ್ಯಾಸಕರ ವೇತನ ಬಿಡುಗಡೆ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ 420 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2022-23 ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಕಳೆದ ಮೂರು ತಿಂಗಳುಗಳಿಂದ ವೇತನ ಮಾಡದೇ ಇರುವದರಿಂದ ರಾಜ್ಯ ಸರ್ಕಾರಕ್ಕೆ ಅತಿಥಿ ಉಪನ್ಯಾಸಕರ ಸಂಘವು ವೇತನ ಬಿಡುಗಡೆ ಮಾಡುವಂತೆ ಒತ್ತಾಯ ಮಾಡಿತ್ತು. ನಂತರ ಸಂಪುಟ ದರ್ಜೆಯ ಹಿರಿಯ ಸಚಿವರಾದ ಡಾ.ಎಚ್. ಕೆ.ಪಾಟೀಲ ಅವರಿಗೆ, ವಿಧಾನ ಪರಿಷತ್ತು ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರಿಗೆ, ಹಾಗೂ ರಾಜ್ಯ ಕೆಪಿಸಿಸಿ ಪದವಿಧರ ಹಾಗೂ ಶಿಕ್ಷಕರ ಘಟಕದ ರಾಜ್ಯಾಧ್ಯಕ್ಷರಾದ ಡಾ.ಆರ್.ಎಂ.ಕುಬೇರಪ್ಪನವರ ಜೊತೆಗೂಡಿ ರಾಜ್ಯ ಸರ್ಕಾರಕ್ಕೆ ಅತಿಥಿ ಉಪನ್ಯಾಸಕರ ವೇತನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವುಕುಮಾರ ಅವರಿಗೆ ಮತ್ತು ಸಚಿವರಾದ ಡಾ.ಎಂ.ಸಿ.ಸುಧಾಕರ ಅವರಿಗೆ ಸಂಪರ್ಕ ಮಾಡಿ, ಅತಿಥಿ ಉಪನ್ಯಾಸಕರ ವೇತನ ಬಿಡುಗಡೆ ಮಾಡಲು ಮನವಿ ಮಾಡಿದ್ದರು. ನಮ್ಮ ಮನವಿಗೆ ಸ್ಪಂದಿಸಿ ಈಗ ರಾಜ್ಯ ಸರ್ಕಾರವು ಮೂರು ತಿಂಗಳ ವೇತನ ಬಿಡುಗಡೆ ಮಾಡಿದೆ ಎಂದು ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಆರ್. ಕಲ್ಮನಿ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಪೀಟರ್ ವಿನೋದ ಚಂದ ಸೇರಿದಂತೆ ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಪದಾಧಿಕಾರಿಗಳು ಸೇರಿಕೊಂಡು ಅತಿಥಿ ಉಪನ್ಯಾಸಕರ ವೇತನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದು ಸಫಲವಾಗಿದೆ ಎಂದು ತಿಳಿಸಿದ್ದಾರೆ.

## ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲರಿಂದ ಸಾರ್ವಜನಿಕರ ಅಹವಾಲು ಸ್ವೀಕಾರ

# ಸಮಸ್ಯೆ ಪರಿಹಾರಕ್ಕೆ ಅಧಿಕಾರಿಗಳಿಗೆ ಸೂಚನೆ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಸೋಮವಾರ ಸಾಯಂಕಾಲ ನಗರದ ಕಾಟನ ಸೇಲ್ ಸೊಸೈಯಟಿಲ್ಲಿನ ತಮ್ಮ ಕಾರ್ಯಾಲಯದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಸಾರ್ವಜನಿಕರಿಂದ ಶಾಂತ ಚಿತ್ತದಿಂದಲೇ ಅಹವಾಲುಗಳನ್ನು ಸ್ವೀಕರಿಸಿದ ಅವರು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಕೂಡಲೆ ಸಮಸ್ಯೆ ಪರಿಹಾರಕ್ಕಾಗಿ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು.

ಗದಗ-ಬೆಟಗೇರಿಯ ಸಾರ್ವಜನಿಕರು ಆಶ್ರಯ ಮನೆ ಮಂಜೂರಾತಿ ಕೋರಿ ಮನವಿ ಸಲ್ಲಿಸಿದರೆ, ವಿದ್ಯಾರ್ಥಿಗಳು ಶಿಷ್ಯವೇತನ, ಹಾಸ್ಟೆಲ್‌ಗಳಲ್ಲಿ ವಸತಿ ಕಲ್ಪಿಸಿ ಕೊಡುವಂತೆ ಮನವಿ ಮಾಡಿದರು.

ವಿಕಲಚೇತನರು ಸರ್ಕಾರದ ಯೋಜನೆಗಳಡಿ ಒದಗಿಸಲಾಗುವ ವಿವಿಧ ಸಾಧನ ಸಲಕರಣೆಗಳನ್ನು ನೀಡುವಂತೆ ಮನವಿ ಮಾಡಿದರು.



ವಿದ್ಯಾಭ್ಯಾಸ ಪೂರೈಸಿದ ಅಭ್ಯರ್ಥಿಗಳು ಖಾಸಗಿ ಹಾಗೂ ಸರಕಾರಿ ಕಚೇರಿಗಳಲ್ಲಿ ಉದ್ಯೋಗ ಅವಕಾಶ ನೀಡುವಂತೆ ಮನವಿ ಮಾಡಿದರು. ಆರೋಗ್ಯ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯ ಧನ ಕುರಿತು ಸಚಿವರಲ್ಲಿ ಮನವಿ ಮಾಡಿದರು. ಈ ಎಲ್ಲ ಮನವಿಗಳನ್ನು ಆಲಿಸಿ ಕೆಲವುಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಿದರು. ಮತ್ತೆ ಕೆಲ ಮನವಿಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಪರಿಹಾರ ಮಾಡುವಂತೆ ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರು, ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು, ಗಣ್ಯರು ಉಪಸ್ಥಿತರಿದ್ದರು.









# ಅಶ್ವಿನಿ ಅರಳಿಯವರಿಗೆ ಡಾಕ್ಟರೇಟ್



**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಅಶ್ವಿನಿ ಎಂ ಅರಳಿ ಇವರು ಮಂಡಿಸಿದ 'ವಾಟರ್ ಆ್ಯಂಡ್ ಸಾಯಿಲ್ ಕ್ವಾಲಿಟಿ ಅನಾಲಿಸಿಸ್ ಇನ್ ದಿ ಫ್ಲೋರೈಡ್ ಅಫೆಕ್ಟೆಡ್ ವಿಲೇಜಸ್ ಆಫ್ ಮುಂಡರಗಿ ತಾಲೂಕ, ಗದಗ ಡಿಸ್ಟ್ರಿಕ್ಟ್, ಕರ್ನಾಟಕ, ಇಂಡಿಯಾ–ಎ ಕೇಸ್ ಸ್ಟಡಿ' ಕುರಿತ ಮಹಾ ಪ್ರಬಂಧಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 23ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸಿವ್ಹಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

ಅಶ್ವಿನಿ ಎಂ ಅರಳಿ ಇವರಿಗೆ ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಹಲವಾರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿರುವ ತೋಂಟ–ದಾರ್ಯ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಕೆ ಲೋಕೇಶರವರು ಮಾರ್ಗದರ್ಶನ ಮಾಡಿದ್ದರು. ಇವರ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಚಾರ್ಯರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ಬ್ರಾಹ್ಮಣ ಸಮಾಜದವರು ಸಂಘಟಿತರಾಗಬೇಕು



**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಬ್ರಾಹ್ಮಣ ಸಮಾಜದವರು ಸಂಘಟಿತರಾಗಿ, ಆರ್ಥಿಕವಾಗಿ ಹಿಂದುಳಿದ ಕುಟುಂಬಕ್ಕೆ ಸಹಾಯ ಹಸ್ತ ನೀಡಲು ಮುಂದಾಗಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಸಂಘಟನಾ ಸಂಚಾಲಕ ವಿಜಯ ನಾಡಜೋಶಿ ಹೇಳಿದರು.

ಅವರು ಪಟ್ಟಣದ ವೆಂಕಟೇಶ್ವರ ದೇವಸ್ಥಾನ ಸಭಾಭವನದಲ್ಲಿ ಬ್ರಾಹ್ಮಣ ಸೇವಾ ಸಂಘದ ವತಿಯಿಂದ ನೆರವೇರಿಸಿದ ರಾಮ ತಾರಕ ಹೋಮದ ನಂತರ ಮಾತನಾಡಿ, ಬ್ರಾಹ್ಮಣ ಸಮಾಜದಲ್ಲೂ ಕೆಲವು ಕುಟುಂಬಗಳು ಇದುವರೆಗೂ ಆರ್ಥಿಕವಾಗಿ ಸಬಲರಾಗಿಲ್ಲ.

ಅಂತಹ ಕುಟುಂಬಗಳನ್ನು ಗುರುತಿಸಿ, ಆ ಕುಟುಂಬದಲ್ಲಿನ ಮಕ್ಕಳ ಶಿಕ್ಷಣಕ್ಕೆ ಹಾಗೂ ಆ ಕುಟುಂಬಗಳು ಆರ್ಥಿಕವಾಗಿ ಸದೃಢರಾಗಲು ನಾವೆಲ್ಲರೂ ಆರ್ಥಿಕ ಸಹಾಯ ಮಾಡೋಣ ಎಂದರು.

ಅಧ್ಯಕ್ಷತೆಯನ್ನು ಪ್ರಹ್ಲಾದ ದೊಡ್ಡವಾಡ ವಹಿಸಿದ್ದರು. ನಾರಾಯಣನಾಯಕ ಆಯಂಜಿ, ಎ ಕೆ ತಮ್ಮಣ್ಣವರ, ಮುಕ್ತಾ ಉಡುಪಿ, ಕಿರಣ ಕುಲಕರ್ಣಿ, ರಾಘವೇಂದ್ರ ಕುಂಬಾರಗೇರಿ, ರಾಜು ಪುಣವಂತ, ಗೋವಿಂದ ಕುಲಕರ್ಣಿ, ಅನಂತ ಕುಲಕರ್ಣಿ, ಪ್ರದೀಪ ತಮ್ಮಣ್ಣವರ, ಗೋಪಾಲ ಗುಡಿ, ಶ್ರೀಪಾದನಾಯಕ ತಮ್ಮಣ್ಣವರ, ನಾಗೇಶ ಬೇಗೂರ, ನಾಗರಾಜ ಮುನವಳ್ಳಿ, ಗೀತಾ ಗುಡಿ, ರೇಖಾ ಶತಪತಿ, ಆಶಾ ದುರ್ಗಿಗುಡಿ, ರೇಣುಕಾ ಕುಲಕರ್ಣಿ, ಉಮಾ ದೊಡ್ಡವಾಡ, ಆರತಿ ಸುಬ್ಬಣ್ಣವರ, ಗಾಯತ್ರಿ ದೊಡ್ಡವಾಡ, ಲತಾ ಕಟ್ಟಿ, ವಿದ್ಯಾ ಸೊರಟೂರ, ತ್ರಿವೇಣಿ ಇಂಗಳಗಿ ಮುಂತಾದವರಿದ್ದರು.

### 220 ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆಗೆ ಭೂಮಿಪೂಜೆ ನೆರವೇರಿಸಿದ ಸಚಿವ ಸತೀಶ್ ಜಾರಕಿಹೊಳಿ

# ಬೆಳಗಾವಿ ನಗರದ ಸಮಗ್ರ ಅಭಿವೃದ್ಧಿಗೆ ಬದ್ಧ

**■ವಿಜಯಸಾಕ್ಷಿ ಸುದ್ದಿ, ಬೆಳಗಾವಿ**

ಬೆಳಗಾವಿ ನಗರವು ರಾಜ್ಯದಲ್ಲಿ ಶರವೇಗದಲ್ಲಿ ಅಭಿವೃದ್ಧಿಯಾಗುತ್ತಿದೆ. ಉದ್ಯಮ, ವಸತಿ ಸೇರಿದಂತೆ ಎಲ್ಲ ರೀತಿಯಿಂದಲೂ ಬೆಳವಣಿಗೆಯಾಗುತ್ತಿದ್ದು, ಇದಕ್ಕೆ ಪೂರಕವಾಗಿ ನೀರು, ವಿದ್ಯುತ್ ಸೇರಿದಂತೆ ಎಲ್ಲ ರೀತಿಯ ಮೂಲಸೌಕರ್ಯವನ್ನು ಒದಗಿಸಲು ಸರಕಾರ ಬದ್ಧವಾಗಿದೆ ಎಂದು ಲೋಕೋಪಯೋಗಿ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ನಗರದ ಮಚ್ಚೆ ವಿದ್ಯುತ್ ವಿತರಣಾ ಕೇಂದ್ರದ ಆವರಣದಲ್ಲಿ ಸೋಮವಾರ 250 ಕೋಟಿ ರೂಪಾಯಿ ವೆಚ್ಚದ 220 ಕೆವಿ ವಿದ್ಯುತ್ ವಿತರಣಾ ಕೇಂದ್ರ ಹಾಗೂ ಬಹು ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ಅನೇಕ ಕೆಲಸಗಳು ಆಗಬೇಕಿದೆ. ಪಕ್ಷಬೇಧವನ್ನು ಮರೆತು ಎಲ್ಲರೂ ಸೇರಿ ಪ್ರಯತ್ನಿಸಿದರೆ ಬೆಳಗಾವಿಯ ಸಮಗ್ರ ಅಭಿವೃದ್ಧಿ ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಸರಕಾರ ಎಲ್ಲ ರೀತಿಯ ನೆರವು ನೀಡಲಿದೆ ಎಂದು ಭರವಸೆ ನೀಡಿದರು.



ಸದ್ಯಕ್ಕಿರುವ ಜಾಗೆಯಲ್ಲಿ 220 ಕೆವಿ ಕೇಂದ್ರ ನಿರ್ಮಾಣ ಮಾಡಲಾಗುತ್ತಿದ್ದು, 39 ಕಿಮೀ ಉದ್ದದ ಬಹು ವಿದ್ಯುತ್ ಪ್ರಸರಣ ಮಾರ್ಗವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. 250 ಕೋಟಿ ರೂಪಾಯಿ ವೆಚ್ಚದ ಯೋಜನೆ ಇದಾಗಿದೆ. ಈ ಭಾಗದ ಕೈಗಾರಿಕೆಗಳಿಗೆ ಗುಣಮಟ್ಟದ ವಿದ್ಯುತ್ ಪೂರೈಸಲು ಅನುಕೂಲವಾಗಲಿದೆ ಎಂದು ಸಚಿವರು ಹೇಳಿದರು.

> ಈ ಭಾಗದ ಕೈಗಾರಿಕೋದ್ಯಮಿಗಳ ಬಹುದಿನಗಳ ಬೇಡಿಕೆಯಂತೆ 220 ಕೆವಿ ಹೊಸ ವಿದ್ಯುತ್ ಕೇಂದ್ರದ ನಿರ್ಮಾಣ ಮಾಡಲಾಗುತ್ತಿದೆ. ಉದ್ಯಮಗಳಿಗೆ ಗುಣಮಟ್ಟದ ಹಾಗೂ ನಿರಂತರ ವಿದ್ಯುತ್ ಪೂರೈಕೆ ಅಗತ್ಯವಿರುವುದರಿಂದ ಈ ಕೇಂದ್ರವು ಅನುಕೂಲವಾಗಲಿದೆ. ಆದಷ್ಟು ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಕೈಗಾರಿಕೆಗಳಿಗೆ ವಿದ್ಯುತ್ ಪೂರೈಸಬೇಕು.
>
> **– ಸತೀಶ್ ಜಾರಕಿಹೊಳಿ.**
>
> ಲೋಕೋಪಯೋಗಿ, ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು.



ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಅಭಯ್ ಪಾಟೀಲ, ಈ ವಿದ್ಯುತ್ ಕೇಂದ್ರದ ನಿರ್ಮಾಣದಿಂದ ಕೈಗಾರಿಕೆಗಳಿಗೆ ಉತ್ತೇಜನ ದೊರಕಲಿದೆ.

ಮುಂಬರುವ ದಿನಗಳಲ್ಲಿ 400 ಕೆವಿ ವಿದ್ಯುತ್ ಕೇಂದ್ರದ ಅಗತ್ಯವಿದ್ದು, ಇದಕ್ಕೆ ಸೂಕ್ತ ಭೂಮಿಯನ್ನು ಗುರುತಿಸಬೇಕಿದೆ. ಈ ಸರಕಾರದ ಇಚ್ಛಾಶಕ್ತಿಯಿಂದ ಅದು ಕೈಗೂಡಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಶಾಸಕ ಆಸೀಫ್(ರಾಜು) ಸೇಠ್, ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಹಾಗೂ ಹೆಸ್ಕಾಂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುರ್ತಕೋಟಿ ಗ್ರಾಮದಲ್ಲಿ ಗಂಗಾಮತಸ್ಥರ ಜನಜಾಗೃತಿ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಆ.18ರಂದು ಕೊಪ್ಪಳದಲ್ಲಿ ಜರಗುವ ಎಸ್ ಟಿ ಹೋರಾಟದ ಅಂಗವಾಗಿ ಗಂಗಾಮತಸ್ಥರ ಜನಜಾಗೃತಿ ಸಭೆ ಇತ್ತೀಚಿಗೆ ತಾಲೂಕಿನ ಕುರ್ತಕೋಟಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಹೋರಾಟ ಸಮಿತಿ ಸಂಚಾಲಕ ಸಂಗಮೇಶ ಹಾದಿಮನಿ, ಗಂಗಾಮತಸ್ಥರ ಮಕ್ಕಳ ಶೈಕ್ಷಣಿಕ ಹಾಗೂ ಭವಿಷ್ಯದ ದೃಷ್ಟಿಯಿಂದ ಹೋರಾಟ ಅನಿವಾರ್ಯವಾಗಿದ್ದು, ಆಗಸ್ಟ್ 18 ರಂದು ಕೊಪ್ಪಳದಲ್ಲಿ ಜರುಗುವ ಎಸ್ ಟಿ ಹೋರಾಟದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಹೋರಾಟ ಯಶಸ್ವಿಗೊಳಿಸಲು ಕರೆ ನೀಡಿದರು.



ಇದೇ ಸಂದರ್ಭದಲ್ಲಿ ಶಿಕ್ಷಕರಾದ ಮಂಜುನಾಥ ಜಕ್ಕಲಿ, ಸಮಾಜದ ಹಿರಿಯರ ಹಾಗೂ ಯುವಕರ ಪರಿಶ್ರಮದಿಂದ ಗ್ರಾಮದಲ್ಲಿ ಅಂಬಿಗರ ಚೌಡಯ್ಯ ದೇವಸ್ಥಾನ ನಿರ್ಮಾಣವಾಗುತ್ತಿದ್ದು, ಇದಕ್ಕೆ ದೇಣಿಗೆ ನೀಡಿದ ಮಹನೀಯರನ್ನು ಸ್ಮರಿಸಿದರು.

ಗದಗ ಜಿಲ್ಲಾ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ವಿವಿಧೋದ್ದೇಶ ಸೇವಾ ಟ್ರಸ್ಟ್‌ನ ಸಂಘಟನಾ ಕಾರ್ಯದರ್ಶಿ ಗುರಪ್ಪ ತಿರ್ಲಾಪೂರ, ಕುಕನೂರ ಸಮಾಜ ತಾಲೂಕ ಅಧ್ಯಕ್ಷ ಬುಡ್ಡಪ್ಪ ಬಾರಕೇರ, ಬಾಳಪ್ಪ ಬಾರಕೇರ ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಮಾಜದ ಘಟಕ ಅಧ್ಯಕ್ಷರಾದ ವಿಜಯ ಬಾರಕೇರ ವಹಿಸಿದ್ದರು. ಉಪಾಧ್ಯಕ್ಷ ಬೂದೇಶ ಹೊಂಬಳ, ಕಾರ್ಯದರ್ಶಿ ಯಲ್ಲಪ್ಪ ಬಾರಕೇರ, ಖಜಾಂಚಿ ರಂಗಪ್ಪ ಮದ್ದಿನ, ಪ್ರಭು ಬಾರಕೇರ ಸೇರಿದಂತೆ ಸಮಾಜದ ಹಿರಿಯರು ಹಾಗೂ ಯುವಕರು ಪಾಲ್ಗೊಂಡಿದ್ದರು.

### ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲೂಕಾ ಘಟಕದ ವತಿಯಿಂದ ಕಾರ್ಯಕ್ರಮ

# ಶೈಕ್ಷಣಿಕ ವಿಚಾರ ಸಂಕಿರಣ ಇಂದು

**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲೂಕಾ ಘಟಕದ ವತಿಯಿಂದ ಖಾಸಗಿ ಶಿಕ್ಷಣ ಸಂಸ್ಥೆಗಳು, ತಾಲೂಕಾ ರೋಟರಿ ಶಿಕ್ಷಣ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಬೆಳಿಗ್ಗೆ 10.30ಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳ, ನೌಕರರ ಶೈಕ್ಷಣಿಕ ವಿಚಾರ ಸಂಕಿರಣ, ರೋಟರಿ ಶಿಕ್ಷಣ ಸಂಸ್ಥೆಯ ನೂತನ ಶಾಲಾ ಕೊಠಡಿಗಳ ಉದ್ಘಾಟನೆ ಹಾಗೂ ಸನ್ಮಾನ ಸಮಾರಂಭ ನಡೆಯಲಿದೆ ಎಂದು ಮಾಧ್ಯಮಿಕ ಶಾಲಾ ನೌಕರರ ಸಂಘದ ಕೇಂದ್ರ ಸಮಿತಿಯ ಸದಸ್ಯ ಎಸ್ ಎಸ್ ಗಡ್ಡದ ಹೇಳಿದರು.

ಪಟ್ಟಣದ ವ್ಹಿ ಜಿ ಲಿಂಬಿಕಾಯಿ ಶಿಕ್ಷಣ ಸಂಸ್ಥೆಯಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ರೋಟರಿ ಶಿಕ್ಷಣ ಸಂಸ್ಥೆಯ ಅವರಣದಲ್ಲಿ ಸಮಾರಂಭ ನಡೆಯಲಿದ್ದು, ಸಭಾಪತಿ ಬಸವರಾಜ ಹೊರಟ್ಟಿ ಸಮಾರಂಭ ಉದ್ಘಾಟಿಸಲಿದ್ದಾರೆ. ಶ್ರೀ ನಿಜಗುಣಪ್ರಭು ತೋಂಟದಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಶಾಸಕರಾದ ಜಿ ಎಸ್ ಪಾಟೀಲ, ಡಾ.ಚಂದ್ರ ಲಮಾಣಿ, ವಿ ಪ ಸದಸ್ಯ ಎಸ್ ವ್ಹಿ ಸಂಕನೂರ, ಮಾಜಿ ಸಚಿವ ಎಸ್ ಎಸ್ ಪಾಟೀಲ, ವಾಸಣ್ಣ ಕುರಡಗಿ, ಅಕ್ಕಮಹಾದೇವಿ ಕಡ್ಡಿ ಆಗಮಿಸುವವರು ಎಂದು ತಿಳಿಸಿದರು.



ರೋಟರಿ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಕೊಟ್ರೇಶಪ್ಪ ಅಂಗಡಿ ಮಾತನಾಡಿ, ಅಥಿತಿ ಉಪನ್ಯಾಸಕರಾಗಿ ಶಿವಾನಂದ ಪಟ್ಟಣಶೆಟ್ಟಿ, ಡಾ.ಬಸವರಾಜ ಧಾರವಾಡ, ಜ.ಅ.ವಿದ್ಯಾ ಸಮಿತಿ ಅಡಳಿತಾಧಿಕಾರಿ ಡಾ. ಬಿ ಜೆ ಜವಳಿ ಉಪನ್ಯಾಸ ನೀಡಲಿದ್ದಾರೆ. 2022–23ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಖಾಸಗಿ ಸಂಸ್ಥೆ ನೌಕರನ್ನು ಸಮಾರಂಭದಲ್ಲಿ ಸನ್ಮಾನಿಸಲಾಗುವುದು. ಶಿವಕುಮಾರಗೌಡ ಪಾಟೀಲ, ದಿಪಾ ಮರಡ್ಡಿ, ಎಂ ಡಿ ಹಳೇಮನಿ, ಚಂದ್ರಶೇಖರಪ್ಪ ಕೊಪ್ಪಳ, ಹೇಮಾ ನಾಡಗೌಡ, ಡಾ. ಎಂ ಎಂ ಮೇಟಿ, ಮೈಲಾರಪ್ಪ ಕಲಕೇರಿ, ಎಂ ಎ ರಡ್ಡೇರ, ಜಿ ಬಿ ಅಣ್ಣಿಗೇರಿ, ಜಿ ಬಿ ಬಸವಣ್ಣೆಪ್ಪ ಅತಿಥಿಗಳು ಬಾಗವಹಿಸುವವರು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಎಸ್ ಎನ್ ಅಗಡಿ, ಡಿ ಜಿ ಪೂಜಾರ, ಸಿ ವ್ಹಿ ಪಾಟೀಲ, ಎನ್ ಡಿ ರಾಠೋಡ, ಮೈಲಾರಪ್ಪ ಕಲಕೇರಿ ಮುಂತಾದವರಿದ್ದರು.

### ರೋಗ ನಿಯಂತ್ರಣಕ್ಕೆ ರೈತರ ಹರಸಾಹಸ: ಪರಿಹಾರಕ್ಕೆ ಒತ್ತಾಯ

# ಬೆಂಕಿರೋಗಕ್ಕೆ ಬಲಿಯಾದ ಮೆಕ್ಕೆಜೋಳ



> ಪ್ರತಿ ಎಕರೆ ಗೋವಿನ ಜೋಳ ಬಿತ್ತನೆ, ಕ್ರಿಮಿನಾಶಕ ಸಿಂಪಡಣೆ, ಎಡೆ ಹೊಡೆಯುವುದು ಸೇರಿ ಎಕರೆಗೆ 10 ಸಾವಿರ ರೂ ಖರ್ಚು ಮಾಡಿದ್ದಾರೆ. ಬೆಳೆ ಬರುತ್ತದೆ ಎಂಬ ಭರವಸೆಯಲ್ಲಿ ರೈತರು ಬಡ್ಡಿಸಾಲ ಮಾಡಿದ್ದಾರೆ. ಈಗ ಬೆಳೆ ರೋಗಬಾಧೆಯಿಂದ ಕಣ್ಣ ಮುಂದೆಯೇ ಒಣಗಿ ಹೋಗುತ್ತಿರುವುದರಿಂದ ರೈತರಿಗೆ ದಿಕ್ಕು ತೋಚದಂತಾಗಿದೆ. ಆದ್ದರಿಂದ ಸರ್ಕಾರ ಶೀಘ್ರವಾಗಿ ರೈತರಿಗೆ ಬೆಳೆಹಾನಿ ಪರಿಹಾರ ಕಲ್ಪಿಸಬೇಕು.
>
> **– ಟಾಕಪ್ಪ ಸಾತಪುತೆ.**
>
> ಭಾರತೀಯ ಕಿಸಾನ ಸಂಘದ ತಾಲೂಕಾಧ್ಯಕ್ಷರು.

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವರ್ಷದಿಂದ ವರ್ಷಕ್ಕೆ ಮೆಕ್ಕೆ ಜೋಳದ ಬಿತ್ತನೆ ಕ್ಷೇತ್ರ ಹೆಚ್ಚುತ್ತಿದೆ. ಇದರೊಂದಿಗೆ ರೋಗಬಾಧೆಯೂ ಹೆಚ್ಚುತ್ತಿದ್ದು, ರೈತರು ನಷ್ಟ–ಸಂಕಷ್ಟ ಅನುಭವಿಸುವಂತಾಗಿದೆ. ಪ್ರಸಕ್ತ ಮುಂಗಾರಿನಲ್ಲಿ ತಾಲೂಕಿನಲ್ಲಿ 10 ಸಾವಿರ ಹೆಕ್ಟೇರ್‌ಗಿಂತಲೂ ಹೆಚ್ಚು ಕ್ಷೇತ್ರದಲ್ಲಿ ಗೋವಿನಜೋಳ ಬಿತ್ತನೆ ಮಾಡಿದ್ದಾರೆ.

ಲಕ್ಷ್ಮೇಶ್ವರ ತಾಲೂಕಿನ ಹರದಗಟ್ಟಿ ಗ್ರಾಮದ ರೈತರು ಬೆಳೆದ ಮೆಕ್ಕೆಜೋಳಕ್ಕೆ ಲದ್ದಿಹುಳು ಬಾಧೆ ಆವರಿಸಿದೆ. 15–20 ದಿನಗಳ ಬೆಳೆಗೆ ಲದ್ದಿಹುಳು ಬಾಧೆ ಆವರಿಸುತ್ತಿದ್ದು, ರೋಗ ನಿಯಂತ್ರಣಕ್ಕೆ ರೈತರು ಹರಸಾಹಪಡುತ್ತಿದ್ದಾರೆ. ಬೆಂಕಿರೋಗಕ್ಕೆ ಬೆಳೆಯೇ ಒಣಗಿ ರೈತರ ಚಿಂತೆ ಇನ್ನಷ್ಟು ಹೆಚ್ಚುವಂತಾಗಿದೆ.

ಕಳೆದ ವರ್ಷವೂ ಅತಿವೃಷ್ಟಿಯಿಂದ ಬೆಳೆಹಾನಿ ಅನುಭವಿಸಿದ್ದೇವೆ. ಇದೀಗ ಮೆಕ್ಕೆಜೋಳ ಬೆಂಕಿರೋಗದಿಂದ ಒಣಗುತ್ತಿದೆ. ಮುಂಗಾರಿನ ಬೆಳೆ ಮಾತ್ರ ಬೆಳೆಯುವ ಮಸಾರಿ ಜಮೀನು ಹೊಂದಿರುವ ರೈತರು ಜೀವನ ನಡೆಸುವುದಾದರೂ ಹೇಗೆ ಎಂದು ರೈತರಾದ ಫಕ್ಕೀರಪ್ಪ ಮಾಳಗಿಮನಿ, ಕೃಷ್ಣ ಲಮಾಣಿ ಶಂಕರಪ್ಪ ನಾಯಕ, ಶಂಕರ ಲಮಾಣಿ, ಲಕ್ಷಪ್ಪ ಲಮಾಣಿ, ರವಿಕುಮಾರ ಲಮಾಣಿ ಅಳಲು ತೋಡಿಕೊಂಡಿದ್ದಾರೆ.

ಮೆಕ್ಕೆಜೋಳದ ಬೆಳೆಗೆ ನೈಟ್ರೋಜನ್ ಮತ್ತು ಪಾಸ್ಫರಸ್ ಪೋಷಕಾಂಶದ ಕೊರತೆಯಿಂದ ಬೆಳೆ ಕಂದು ಬಣ್ಣಕ್ಕೆ ತಿರುಗಿ ಗರಿಗಳು ಒಣಗಿದಂತಾಗಿ ಉದುರುತ್ತಿರುವದನ್ನು ಕಾಣಬಹುದಾಗಿದೆ. ಈ ಪೋಷಕಾಂಶಯುಕ್ತ ದ್ರವರೂಪದ ರಸಗೊಬ್ಬರ ಮತ್ತು ಮೈಕ್ರೋನ್ಯೂಟ್ರಂಟ್ ಬೆರಸಿ ಸಿಂಪರಣೆ ಮಾಡಿದಲ್ಲಿ ಒಂದು ವಾರದ ನಂತರ ಸುಧಾರಣೆ ಕಾಣುತ್ತದೆ. ಬಿತ್ತನೆ ಪೂರ್ವದಲ್ಲಿ ಹೊಲಗಳಿಗೆ ಪೋಷಕಾಂಶಗಳ ಕೊರತೆ ನೀಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಬೀಜೋಪಚಾರ ಮಾಡಬೇಕು. ಪದೇಪದೇ ಒಂದೇ ರೀತಿಯ ಬೆಳೆ ಬೆಳೆಯುವುದು ಈ ಸಮಸ್ಯೆಗೆ ಕಾರಣವಾಗುತ್ತದೆ ಎನ್ನುತ್ತಾರೆ ಕೃಷಿ ಅಧಿಕಾರಿ ಚಂದ್ರಶೇಖರ ನರಸಮ್ಮನವರ.

### ರಾಜ್ಯಮಟ್ಟದ ಯುವ ವೈದ್ಯರ ಕಸೋಗಾ ಸಮ್ಮೇಳನದಲ್ಲಿ ಸಚಿವ ಎಚ್ ಕೆ ಪಾಟೀಲ

# ಕಸೋಗಾ ಸಮ್ಮೇಳನದ ನಿರ್ಣಯಗಳು ಸಾಕಾರಗೊಳ್ಳಲಿ

**■ವಿಜಯಸಾಕ್ಷಿ ಸುದ್ದಿ, ಗದಗ**

ತಾಯಿ ಮತ್ತು ಶಿಶುವಿನ ಸುರಕ್ಷತೆಗಾಗಿ ಮನೆಗಿಂತ ಆಸ್ಪತ್ರೆಯಲ್ಲೇ ವೈದ್ಯಕೀಯವಾಗಿವಾಗಿ ಹೆರಿಗೆಯಾದರೆ ಆರೋಗ್ಯಕರ ಕುಟುಂಬ, ಸಮಾಜ ನಿರ್ಮಾಣಗೊಳ್ಳಲು ಸಾಧ್ಯ. ಪ್ರಸೂತಿ ಮತ್ತು ಸ್ತ್ರೀರೋಗ ಕ್ಷೇತ್ರದಲ್ಲಿ ಗುಣಾತ್ಮಕ ಪ್ರಗತಿಯಾಗಿದ್ದು, ಅದರ ಸದ್ಬಳಕೆ ಆಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಅಭಿಪ್ರಾಯಪಟ್ಟರು.

ಅವರು ರವಿವಾರ ಗದುಗಿನ ಜಿಮ್ಸ್ ಸಭಾಂಗಣದಲ್ಲಿ ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ತಜ್ಞ ವೈದ್ಯರ ಸೊಸೈಟಿ ಹಾಗೂ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಏರ್ಪಡಿಸಿದ್ದ 3ನೇ ರಾಜ್ಯಮಟ್ಟದ ಯುವ ವೈದ್ಯರ ಕಸೋಗಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ವಿಜ್ಞಾನ ಮತ್ತು ತಾಂತ್ರಿಕತೆ, ವೈದ್ಯಕೀಯ ಇಂದು ಸಾಕಷ್ಟು ಅಭಿವೃದ್ಧಿಯಾಗಿದ್ದರೂ ಸಹ ಗ್ರಾಮೀಣ ಪ್ರದೇಶದಲ್ಲಿ ಹಾಗೂ ಕೆಲವು ಲಂಬಾಣಿ ತಾಂಡಾಗಳಲ್ಲಿ ಮನೆಯಲ್ಲಿಯೇ ಹೆರಿಗೆ ಮಾಡಲಾಗುತ್ತಿದೆ. ಇದರಿಂದಾಗಿ ತಾಯಿ–ಮಗುವಿನ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ. ಈ ಕಾರಣದಿಂದಾಗಿ ಆಸ್ಪತ್ರೆಗಳಲ್ಲಿಯೇ ಪ್ರಸೂತಿ ಮತ್ತು ತಜ್ಞರಿಂದ ಹೆರಿಗೆ ಮಾಡಿಸುವುದು ಸುರಕ್ಷಿತ. ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸುವದನ್ನು ಕಡ್ಡಾಯಗೊಳಿಸಬೇಕೆಂದರು.




ಆರೋಗ್ಯಕರ ಸಮಾಜ, ರಾಜ್ಯ, ರಾಷ್ಟ್ರ ಕಟ್ಟುವಲ್ಲಿ ತಾಯಿ ಮತ್ತು ಶಿಶುವಿನ ಮರಣದ ಪ್ರಮಾಣವನ್ನು ಇಳಿಕೆಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ಕ್ರಮ ಹಾಗೂ ಸರಕಾರದಿಂದ ನಿರೀಕ್ಷಿಸುವ ಸಹಕಾರದ ಬಗ್ಗೆ ಈ ಯುವ ಕಸೋಗಾ ಸಮ್ಮೇಳನದ ನಿರ್ಣಯಗಳು ಸ್ಪಷ್ಟವಾಗಲಿ. ಅವು ಸಾಕಾರವೂ ಆಗಲಿ ಎಂದು ಆಶಿಸಿದ ಸಚಿವರು, ಗದಗ ಜಿಮ್ಸ್‌ನಲ್ಲಿ ಕ್ಯಾತ್‌ಲ್ಯಾಬ್ ನಿರ್ಮಾಣಕ್ಕೆ ಈಗಾಗಲೇ ಸರಕಾರ ಒಪ್ಪಿಗೆ ಸೂಚಿಸಿದೆ. ಸದ್ಯ ಇರುವ ವ್ಯವಸ್ಥೆಯನ್ನು ಹೊರತುಪಡಿಸಿ, 450 ಹಾಸಿಗೆ ಸೌಲಭ್ಯದ ಕಟ್ಟಡ ಶೀಘ್ರದಲ್ಲಿ ಲೋಕಾರ್ಪಣೆಗೊಳಿಸಲು ಕ್ರಮ ಜರುಗಿಸಲಾಗಿದೆ ಎಂದರು.

ಜಿಮ್ಸ್ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಮಾತನಾಡಿ, ಸಚಿವ ಎಚ್ ಕೆ ಪಾಟೀಲರ ದೂರದೃಷ್ಟಿಯಿಂದ ಜಿಮ್ಸ್ ರೂಪುಗೊಂಡಿದ್ದು ಅವರ ಸಹಕಾರ ಸ್ಮರಣೀಯ ಎಂದರು. ಡಾ.ಸವಿತಾ ಹೊಂಬಾಳೆ ಪ್ರಾರ್ಥಿಸಿದರು. ಸಂಘಟಕರಾದ ಡಾ.ಶಶಿಧರ ರೇಶ್ಮೆ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಸಪ್ನಾ ಕಾಳೆ, ಡಾ. ಸುನೀತಾ ಕುರಡಗಿ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ಡಾ. ಶೃತಿ ಭಾವಿಪಾಟೀಲ ವಂದಿಸಿದರು.


ವೇದಿಕೆಯ ಮೇಲೆ ಡಾ. ಎಚ್ ನಾಗರಾಜ್, ಡಾ. ವಿದ್ಯಾ ತೊಬ್ಬಿ, ಡಾ. ರಾಜಶ್ರೀ ಪಲಾದಿ, ಡಾ. ಕಸ್ತೂರಿ ಡೋಣಿಮಠ, ಡಾ. ಸುಮನ್, ಡಾ. ಎಂ ಜಿ ಹಿರೇಮಠ ಇತರರು ಉಪಸ್ಥಿತರಿದ್ದರು.

> ತಾಯಿ, ಶಿಶು ಮರಣ ಪ್ರಮಾಣ ಕಡಿಮೆ ಇರುವ ದೇಶಗಳು ಅಭಿವೃದ್ಧಿಶೀಲ ರಾಷ್ಟ್ರಗಳಾಗಿವೆ. ಭಾರತವೂ ಅಂಥ ಅಭಿವೃದ್ಧಿಶೀಲ ರಾಷ್ಟ್ರವಾಗಬೇಕಾದರೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಕೊಡುಗೆ ಅಗತ್ಯವಾಗಿದೆ. ಶಿಶು, ತಾಯಿ ಮರಣ ಕಡಿಮೆ ಮಾಡುವಲ್ಲಿ ಸರಕಾರ, ಸಮುದಾಯ, ಶಿಕ್ಷಣದ ಜೊತೆಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಜವಾಬ್ದಾರಿಯೂ ಅಷ್ಟೇ ಮುಖ್ಯವಾಗಿದೆ. ಮುಂದುವರಿದ ದೇಶಗಳಲ್ಲಿ ಶಿಶು, ತಾಯಿ ಮರಣ ಪ್ರಮಾಣ 0.5ರಿಂದ 1.5ರಷ್ಟಿದೆ. ಭಾರತವೂ ಆ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಯುವ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಮುಂದಾಗಬೇಕು.
>
> **– ಎಚ್ ಕೆ ಪಾಟೀಲ.**
>
> ಜಿಲ್ಲಾ ಉಸ್ತುವಾರಿ ಸಚಿವರು.

> ಸಮ್ಮೇಳನದಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಹೆಸರಾಂತ ತಜ್ಞ ವೈದ್ಯರಿಂದ ಉಪನ್ಯಾಸ, ಚರ್ಚೆ, ಸಂವಾದಗಳು ನಡೆದವು. ಗದಗ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಹಿರಿಯ–ಕಿರಿಯ ತಜ್ಞರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

## ನಿಧನ ವಾರ್ತೆ

### ದುರಗಪ್ಪ ಬಳೂಟಗಿ



**ಗದಗ:** ಜಿಲ್ಲೆಯ ಗಜೇಂದ್ರಗಡ ಪುರಸಭೆಯ ಮಾಜಿ ಚೇರಮನ್ ರಾಗಿದ್ದ ದುರಗಪ್ಪ ಎಚ್. ಬಳೂಟಗಿ ( 92) ಅವರು ಗಜೇಂದ್ರಗಡದಲ್ಲಿ ಸೋಮವಾರ ನಿಧನರಾಗಿದ್ದಾರೆ.

ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ದಿವಂಗತರು ಆಗಲಿದ್ದಾರೆ.

ಗದಗ ಬೇಟಗೇರಿ ನಗರಸಭೆ ಎಇಇ ಎಚ್ ಎ ಬಂಡಿವಡ್ಡರ ಅವರು ದಿವಂಗತರ ಅಳಿಯರಾಗಿದ್ದಾರೆ. ಮೃತರ ಅಂತಿಮಯಾತ್ರೆ ಗಜೇಂದ್ರಗಡ ಪಟ್ಟಣದಲ್ಲಿರುವ ಪ್ರಭಾತ ಚಲನಚಿತ್ರ ಮಂದಿರದ ಬಳಿ ಇರುವ ಸ್ವಗ್ರಹದಿಂದ ಆಗಸ್ಟ್ 8 ರಂದು ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಹೊರಡಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

**ಸಂತಾಪ :** ದಿ ದುರಗಪ್ಪ ಎಚ್ ಬಳೂಟಗಿ ಅವರ ನಿಧನಕ್ಕೆ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ್, ರೋಣ ಶಾಸಕ ಜಿ ಎಸ್ ಪಾಟೀಲ್, ಸೇರಿದಂತೆ ಭೋವಿ ಸಮಾಜದ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

### ಯಚ್ಚರಪ್ಪ ಹಡಪದ



**ಮುಳಗುಂದ:** ಪಟ್ಟಣದ ಚಿಂದಿಪೇಟಿ ಓಣಿಯ ನಿವಾಸಿ ಯಚ್ಚರಪ್ಪ ಹಡಪದ(75) ರವಿವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka